ಕರ್ನಾಟಕ ಸರ್ಕಾರ

## ಸಾರಿಗೆ ಇಲಾಖೆ

Transport Department

# ವಾರ್ಷಿಕ ವರದಿ

## ೧೯೯೪-೯೫

# ಕರ್ನಾಟಕ ಸರ್ಕಾರ

## ಸಾರಿಗೆ ಇಲಾಖೆ

## ವಾರ್ಷಿಕ ವರದಿ

## 1994 - 1995

6141-1

## 1994 ನೇ ಸಾಲಿನ ಸಾರಿಗೆ ಇಲಾಖೆಯ ವಾರ್ಷಿಕ ವರದಿ

### 1. ಪೀಠಿಕೆ.

ಸಾರಿಗೆ ಇಲಾಖೆಯು ರಾಜ್ಯದಲ್ಲಿ ಹೆಚ್ಚು ರಾಜಸ್ವ ಗಳಿಸುವ ಇಲಾಖೆಗಳಲ್ಲಿ ಒಂದಾಗಿದೆ. ಈ ಇಲಾಖೆಯು ಮುಖ್ಯವಾಗಿ ಮೋಟಾರು ವಾಹನಗಳ ತೆರಿಗೆ ವಸೂಲಿ ಮತ್ತು ವ್ಯವಸ್ಥಿತವಾಗಿ ಮೋಟಾರು ವಾಹನಗಳನ್ನು ರಾಜ್ಯದಲ್ಲಿ ಉಪಯೋಗಿಸಲು 1.7.1989 ನೇ ದಿನಾಂಕದಿಂದ ಜಾರಿಗೆ ಬಂದ ಕೇಂದ್ರ ಮೋಟಾರು ವಾಹನಗಳ ಕಾಯಿದೆಯಲ್ಲಿ ಅ. ವಹಿಸಿರುವ ಕ್ರಮಗಳನ್ನು ಸೂಕ್ತವಾಗಿ ಜಾರಿಗೊಳಿಸುವ ಅಧಿಕಾರ ಹೊಂದಿದೆ. ಜಾರಿ ಗೊಳಿಸಬೇಕಾಗಿರುವ ಮುಖ್ಯ ಕಾಯಿದೆ ಮತ್ತು ನಿಯಮಗಳು ಯಾವುವೆಂದರೆ :

1. ಮೋಟಾರು ವಾಹನಗಳ ಕಾಯಿದೆ 1988 ( 1988ರ ಕೇಂದ್ರ ಕಾಯಿದೆ 59ರ ಪ್ರಕಾರ)
2. ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989.
3. ಕರ್ನಾಟಕ ಮೋಟಾರು ವಾಹನ ನಿಯಮಗಳು 1989.
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ 1957 ( 1957 ನೇ ಕರ್ನಾಟಕ ಕಾಯಿದೆ 35 ರ ಪ್ರಕಾರ ). ಮತ್ತು
5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು 1957.

### 2. ಆಡಳಿತ ವ್ಯವಸ್ಥೆ.

2.1 ಸಾರಿಗೆ ಆಯುಕ್ತರು ಸಾರಿಗೆ ಇಲಾಖೆಯ ಮುಖ್ಯಸ್ಥರಾಗಿದ್ದು ಅವರಿಗೆ ಮುಖ್ಯ ಕಛೇರಿಯಲ್ಲಿ ನೆರವಾಗಲು ಈ ಕೆಳಕಂಡ ಅಧಿಕಾರಿಗಳು ಇರುತ್ತಾರೆ :

1. ಜಂಟಿ ಸಾರಿಗೆ ಆಯುಕ್ತರು ( ಆಡಳಿತ )

2. (ಅ) ಜಂಟಿ ಸಾರಿಗೆ ಆಯುಕ್ತರು(ಪ್ರವರ್ತನ) ದಕ್ಷಿಣ

   (ಆ) ಜಂಟಿ ಸಾರಿಗೆ ಆಯುಕ್ತರು (ಪ್ರವರ್ತನ) ಉತ್ತರ (ಧಾರವಾಡ ಕೇಂದ್ರ ಕಾರ್ಯಸ್ಥಾನ).

3. ಜಂಟಿ ಸಾರಿಗೆ ಆಯುಕ್ತರು ಮತ್ತು ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು.

4. ಸಹಾಯಕ ಸಾರಿಗೆ ಆಯುಕ್ತರು ( ಕೇಂದ್ರ ಕಾರ್ಯಸ್ಥಾನ.

5. ಕಾನೂನು ಅಧಿಕಾರಿ.

6. ಹಣಕಾಸಿನ ಸಹಾಯಕರು ( ಲೆಕ್ಕ ).

7. ಹಣಕಾಸಿನ ಸಹಾಯಕರು ( ಲೆಕ್ಕ ಪರಿಶೋಧನೆ ).

8. ಅಂಕಿ—ಅಂಶಗಳ ಸಹಾಯಕ ನಿರ್ದೇಶಕರು.

9. ಇಬ್ಬರು ಸಹಾಯಕ ಕಾನೂನು ಅಧಿಕಾರಿಗಳು.

10. ನಾಲ್ವರು ಸಹಾಯಕ ಕಾರ್ಯದರ್ಶಿಗಳು.

2.2 ಸಾರಿಗೆ ಆಯುಕ್ತರಿಗೆ ಆಯಾ ವಿಭಾಗದ ಮುಖ್ಯಸ್ಥರಾದ ಉಪ ಸಾರಿಗೆ ಆಯುಕ್ತರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸಹಾಯಕ ರಾಗುತ್ತಾರೆ. ಈ ಕೆಳಗೆ ಪ್ರಾದೇಶಿಕ ಸಾರಿಗೆ ಮತ್ತು ಸಹಾಯಕ ಸಾರಿಗೆ ಕಛೇರಿಗಳ ಹೆಸರುಗಳನ್ನು ಆಯಾ ವಿಭಾಗಗಳೊಡನೆ ಕೊಡಲಾಗಿದೆ.

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಜಿಲ್ಲೆಯ ಸಾಧನಿಕ ಪ್ರಾದೇಶಿಕ ಸಾರಿಗೆ ಕಚೇರಿಗಳ ಹೆಸರುಗಳು | ಇತರ ಪ್ರಾದೇಶಿಕ ಕಚೇರಿಗಳ ಹೆಸರುಗಳು | ಉಪ ಪ್ರಾದೇಶಿಕ ಸಾರಿಗೆ ಕಚೇರಿಗಳ ಹೆಸರುಗಳು. |
| --- | --- | --- | --- | --- |
| 1 | 2 | 3 | 4 | 5 |
| 1. | ಬೆಂಗಳೂರು | 1. ಬೆಂಗಳೂರು ( ಕೇಂದ್ರ ) | | |
| | | 2. — " — (ಪೂರ್ವ) | | |
| | | 3. — " — ( ಪಶ್ಚಿಮ ) | | |
| | | 4. — " — (ದಕ್ಷಿಣ) | | |
| | | 5. — " — ( ಉತ್ತರ ) | | |
| | | 6. ತುಮಕೂರು | | |
| | | 7. ಕೋಲಾರ | | 1. ಕೆ.ಜಿ.ಎಫ್ |
| | | | | 2. ಚಿಕ್ಕಬಳ್ಳಾಪುರ |
| 2. | ಬೆಳಗಾಂ | 8. ಬೆಳಗಾಂ | 1. ಚಿಕ್ಕೋಡಿ | 3. ಬೈಲಹೊಂಗಲ |
| | | 9. ಬಿಜಾಪುರ | 2. ಬಾಗಲಕೋಟೆ | |
| | | 10. ಉತ್ತರ ಕನ್ನಡ | 3. ಸಿರ್ಸಿ | |
| | | 11. ಧಾರವಾಡ | 4. ಗದಗ | |
| | | | 5. ಹಾವೇರಿ | |
| 3. | ಗುಲ್ಬರ್ಗಾ | 12. ಬಳ್ಳಾರಿ | 6. ಹೊಸಪೇಟೆ | |
| | | 13. ಬೀದರ | | |
| | | 14. ಗುಲ್ಬರ್ಗಾ | | 4. ಭಾಲ್ಕಿ |
| | | 15. ರಾಯಚೂರು | 7. ಗಂಗಾವತಿ | 5. ಯಾದಗಿರಿ |

| 1 | 2 | 3 | 4 | |
|---|---|---|---|---|
| 4. | ಮೈಸೂರು | 16. ಹಾಸನ<br>17. ಕೊಡಗು<br>18. ಮೈಸೂರು<br>19. ಮಂಡ್ಯ | 8. ಚಾಮರಾಜನಗರ | |
| 5. | ಶಿವಮೊಗ್ಗ | 20. ಚಿಕ್ಕಮಗಳೂರು<br>21. ಚಿತ್ರದುರ್ಗ<br>22. ದಕ್ಷಿಣ ಕನ್ನಡ<br>23. ಶಿವಮೊಗ್ಗ. | 9. ದಾವಣಗೆರೆ<br>10. ಉಡುಪಿ | 6. ಪುತ್ತೂರು<br>7. ಸಾಗರ |

2.3 ವಿಭಾಗೀಯ ಮಟ್ಟದಲ್ಲಿ ಉಪ ಸಾರಿಗೆ ಆಯುಕ್ತರು ದಿನನಿತ್ಯ ದ ಆಡಳಿತದಲ್ಲಿ ಅವರವರ ವ್ಯಾಪ್ತಿಯಲ್ಲಿ ಬರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡುವುದಲ್ಲದೆ ಅವರ ಕಛೇರಿಗಳ ಮೇಲ್ವಿಚಾರಕರೂ ಆಗಿರುತ್ತಾರೆ. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಛೇರಿಗಳ ವಿವರವಾದ ಮತ್ತು ಸ್ಥೂಲ ತಪಾಸಣೆಗಳನ್ನು ನಿಗದಿತ ಸಮಯದಲ್ಲಿ ನಡೆಸುತ್ತಾರೆ. ಇದಲ್ಲದೆ ಪ್ರಾದೇಶಿಕ ಸಾರಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೇಲ್ಕಂಡ ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಚಾಲಕರು ಮತ್ತು ನಿರ್ವಾಹಕರ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸುವ, ನೋಂದಣಿ ಪತ್ರ ನವೀಕರಿಸುವ, ತಿರಸ್ಕರಿಸಲ್ಪಡುವ, ಸಾರಿಗೇತರ ವಾಹನಗಳ ನೋಂದಣಿಯನ್ನು ನವೀಕರಿಸುವ, ಅರ್ಹತಾ ಪ್ರಪತ್ರಗಳನ್ನು ಅಮಾನತ್ತಿನಲ್ಲಿಡುವ, ವಜಾ ಮಾಡುವ ಮತ್ತು ತೆರಿಗೆ ಸಂಬಂಧವಾದ ವಿಷಯಗಳ ಬಗ್ಗೆ ಮಾಡಿದ ಆಜ್ಞೆಗಳ ವಿರುದ್ಧ ಉಪ ಸಾರಿಗೆ ಆಯುಕ್ತರು ಮೇಲ್ಮನವಿಯ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಾರೆ. 1994 ನೇ ವರ್ಷದಲ್ಲಿ (1.4.1994 ರಿಂದ 31.12.1994 )ರ ವರೆಗೆ ಮೇಲ್ಮನವಿಗಳ ಸ್ವೀಕಾರ ಮತ್ತು ವಿಲೇವಾರಿ ಮಾಡಿದ ವಿವರಗಳು ಈ ಕೆಳಕಂಡಂತಿವೆ.

| 1 | 2 | 3 | 4 | |
|---|---|---|---|---|
| 4. | ಮೈಸೂರು | 16. ಹಾಸನ<br>17. ಕೊಡಗು<br>18. ಮೈಸೂರು<br>19. ಮಂಡ್ಯ | 8. ಚಾಮರಾಜನಗರ | |
| 5. | ಶಿವಮೊಗ್ಗ | 20. ಚಿಕ್ಕಮಗಳೂರು<br>21. ಚಿತ್ರದುರ್ಗ<br>22. ದಕ್ಷಿಣ ಕನ್ನಡ<br>23. ಶಿವಮೊಗ್ಗ. | 9. ದಾವಣಗೆರೆ<br>10. ಉಡುಪಿ | 6. ಪುತ್ತೂರು<br>7. ಸಾಗರ |

2·3 ವಿಭಾಗೀಯ ಮಟ್ಟದಲ್ಲಿ ಉಪ ಸಾರಿಗೆ ಆಯುಕ್ತರು ದಿನನಿತ್ಯ ದ ಆಡಳಿತದಲ್ಲಿ ಅವರವರ ವ್ಯಾಪ್ತಿಯಲ್ಲಿ ಬರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡುವುದಲ್ಲದೆ ಅವರ ಕಛೇರಿಗಳ ಮೇಲ್ವಿಚಾರಕರಾ ಆಗಿರುತ್ತಾರೆ. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಛೇರಿಗಳ ವಿವರವಾದ ಮತ್ತು ಸ್ಥೂಲ ತಪಾಸಣೆಗಳನ್ನು ನಿಗದಿತ ಸಮಯದಲ್ಲಿ ನಡೆಸುತ್ತಾರೆ. ಇದಲ್ಲದೆ ಪ್ರಾದೇಶಿಕ ಸಾರಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೇಲ್ಕಂಡ ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಚಾಲಕರು ಮತ್ತು ನಿರ್ವಾಹಕರ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸುವ, ನೋಂದಣಿ ಪತ್ರ ನವೀಕರಿಸುವ, ತಿರಸ್ಕರಿಸಲ್ಪಡುವ, ಸಾರಿಗೇತರ ವಾಹನಗಳ ನೋಂದಣಿಯನ್ನು ನವೀಕರಿಸುವ, ಅರ್ಹತಾ ಪ್ರಪತ್ರಗಳನ್ನು ಅಮಾನತ್ತಿನಲ್ಲಿಡುವ, ವಜಾ ಮಾಡುವ ಮತ್ತು ತೆರಿಗೆ ಸಂಬಂಧವಾದ ವಿಷಯಗಳ ಬಗ್ಗೆ ಮಾಡಿದ ಆಜ್ಞೆಗಳ ವಿರುದ್ಧ ಉಪ ಸಾರಿಗೆ ಆಯುಕ್ತರು ಮೇಲ್ಮನವಿಯ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಾರೆ. 1994 ನೇ ವರ್ಷದಲ್ಲಿ(1·4·1994 ರಿಂದ 31·12·1994 ರ ವರೆಗೆ ಮೇಲ್ಮನವಿಗಳ ಸ್ವೀಕಾರ ಮತ್ತು ವಿಲೇವಾರಿ ಮಾಡಿದ ವಿವರಗಳು, ಈ ಕೆಳಕಂಡಂತಿವೆ.

| 1 | 2 | 3 | 4 | |
|---|---|---|---|---|
| 4. | ಮೈಸೂರು | 16. ಹಾಸನ<br>17. ಕೊಡಗು<br>18. ಮೈಸೂರು<br>19. ಮಂಡ್ಯ | 8. ಚಾಮರಾಜನಗರ | |
| 5. | ಶಿವಮೊಗ್ಗ | 20. ಚಿಕ್ಕಮಗಳೂರು<br>21. ಚಿತ್ರದುರ್ಗ<br>22. ದಕ್ಷಿಣ ಕನ್ನಡ<br>23. ಶಿವಮೊಗ್ಗ. | 9. ದಾವಣಗೆರೆ<br>10. ಉಡುಪಿ | 6. ಪುತ್ತೂರು<br>7. ಸಾಗರ |

2·3 ವಿಭಾಗೀಯ ಮಟ್ಟದಲ್ಲಿ ಉಪ ಸಾರಿಗೆ ಆಯುಕ್ತರು ಬನಸಿತ್ಯ ದ ಆಡಳಿತದಲ್ಲಿ ಅವರವರ ವ್ಯಾಪ್ತಿಯಲ್ಲಿ ಬರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಲ್ಲದೆ ಅವರ ಕಛೇರಿಗಳ ಮೇಲ್ವಿಚಾರಕರೂ ಆಗಿರುತ್ತಾರೆ. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕಛೇರಿಗಳ ವಿವರವಾದ ಮತ್ತು ಸಾಮಾನ್ಯ ತಪಾಸಣೆಗಳನ್ನು ನಿಗದಿತ ಸಮಯದಲ್ಲಿ ನಡೆಸುತ್ತಾರೆ. ಇದಲ್ಲದೆ ಪ್ರಾದೇಶಿಕ ಸಾರಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೇಲ್ಕಂಡ ಕಾಯಿದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಚಾಲಕರು ಮತ್ತು ನಿರ್ವಾಹಕರ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸುವ, ನೋಂದಣಿ ಪತ್ರ ನವೀಕರಿಸುವ, ತಿರಸ್ಕರಿಸಲ್ಪಡುವ, ಸಾರಿಗೇತರ ವಾಹನಗಳ ನೋಂದಣಿಯನ್ನು ನವೀಕರಿಸುವ, ಅರ್ಹತಾ ಪ್ರಪತ್ರಗಳನ್ನು ಅಮಾನತ್ತಿನಲ್ಲಿಡುವ, ವಜಾ ಮಾಡುವ ಮತ್ತು ತೆರಿಗೆ ಸಂಬಂಧವಾದ ವಿಷಯಗಳ ಬಗ್ಗೆ ಮಾಡಿದ ಆಜ್ಞೆಗಳ ವಿರುದ್ಧ ಉಪ ಸಾರಿಗೆ ಆಯುಕ್ತರು ಮೇಲ್ಮನವಿಯ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಾರೆ. 1994 ನೇ ವರ್ಷದಲ್ಲಿ (1·4·1994 ರಿಂದ 31·12·1994 )ರ ವರೆಗೆ ಮೇಲ್ಮನವಿಗಳ ಸ್ವೀಕಾರ ಮತ್ತು ವಿಲೇವಾರಿ ಮಾಡಿದ ವಿವರಗಳು ಈ ಕೆಳಕಂಡಂತಿವೆ.

ತೆರಿಗೆ ಮೇಲ್ಮನವಿಗಳು.

| ಕ್ರಮ ಸಂಖ್ಯೆ | ವಿಭಾಗ | ಆರಂಭ ಶಿಲ್ಕು | ಸ್ವೀಕಾರ 1.4.94 – 31.12.94 | ಒಟ್ಟು | ವಿಲೇವಾರಿ 1.4.94– 31.12.94 | 31.12.94 ರಲ್ಲಿದ್ದಂತೆ ಬಾಕಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಬೆಂಗಳೂರು | 23 | 76 | 99 | 92 | 7 |
| 2. | ಬೆಳಗಾಂ | 11 | 17 | 28 | 23 | 5 |
| 3. | ಮೈಸೂರು | 50 | 22 | 72 | 27 | 45 |
| 4. | ಶಿವಮೊಗ್ಗ | 19 | 12 | 31 | 14 | 17 |
| 5. | ಗುಲ್ಬರ್ಗ | 7 | 9 | 16 | 14 | 2 |
| | ಒಟ್ಟು | 110 | 136 | 246 | 170 | 76 |

ನೋಂದಣಿ ಮೇಲ್ಮನವಿಗಳು.

| | | | | | | |
|---|---|---|---|---|---|---|
| 1. | ಬೆಂಗಳೂರು | 4 | 12 | 16 | 14 | 2 |
| 2. | ಬೆಳಗಾಂ | – | – | – | – | – |
| 3. | ಮೈಸೂರು | 1 | 5 | 6 | 3 | 3 |
| 4. | ಶಿವಮೊಗ್ಗ | – | 11 | 11 | 2 | 9 |
| 5. | ಗುಲ್ಬರ್ಗಾ | – | – | – | – | – |
| | ಒಟ್ಟು | 5 | 28 | 33 | 19 | 14 |

6147-2

| 1 | 2 | 3 | 4 | 5 | 6 | 7 |
|---|---|---|---|---|---|---|
| | ಚಾಲಕರ ಮತ್ತು ನಿರ್ವಾಹಕರ ಪರವಾನಗಿ ಪ್ರೇಕ್ಷಕವಿಗಳು: | | | | | |
| 1. | ಬೆಂಗಳೂರು | – | 3 | 3 | – | 3 |
| 2. | ಬೆಳಗಾಂ | – | – | – | – | – |
| 3. | ಮೈಸೂರು | 4 | 6 | 10 | 2 | 8 |
| 4. | ಗುಲ್ಬರ್ಗ | – | 1 | 1 | – | 1 |
| 5. | ಶಿವಮೊಗ್ಗ | – | 2 | 2 | – | 2 |
| | ಒಟ್ಟು | 4 | 12 | 16 | 2 | 14 |
| | ಒಟ್ಟು ( ಎಲ್ಲಾ ಸೇರಿ ). | | | | | |
| 1. | ಬೆಂಗಳೂರು | 27 | 91 | 118 | 106 | 12 |
| 2. | ಬೆಳಗಾಂ | 11 | 17 | 28 | 23 | 5 |
| 3. | ಮೈಸೂರು | 55 | 33 | 88 | 32 | 56 |
| 4. | ಗುಲ್ಬರ್ಗ | 7 | 10 | 17 | 14 | 3 |
| 5. | ಶಿವಮೊಗ್ಗ | 19 | 25 | 44 | 16 | 28 |
| | ಒಟ್ಟು | 119 | 176 | 295 | 191 | 104 |

2.4. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆಯಾ ಪ್ರಾದೇಶಿಕ ಸಾರಿಗೆ ಕಛೇರಿ, ಅಥವಾ ಉಪ ಪ್ರಾದೇಶಿಕ ಸಾರಿಗೆ ಕಛೇರಿಯ ಅನುಕ್ರಮವಾಗಿ ಮುಖ್ಯಸ್ಥರಾಗಿರುತ್ತಾರೆ.

ಜಿಲ್ಲಾ ಸ್ಥಾನಿಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಚಾಲಕ ನಿರ್ವಾಹಕರ ಪರವಾನಗಿ ನೀಡುವ ಪರವಾನಗಿ ಅಧಿಕಾರಿಯಾಗಿ, ಮೋಟಾರು ವಾಹನಗಳನ್ನು ನೋಂದಾಯಿಸುವ ನೋಂದಣಿಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಸಾರಿಗೆ ವಾಹನಗಳಿಗೆ ರಹದಾರಿಯನ್ನು ನೀಡುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿಯಾಗಿಯೂ ಅವರು ಕೆಲಸ ನಿರ್ವಹಿಸುತ್ತಾರೆ.

## 3. ಚಾಲಕರ ಹಾಗೂ ನಿರ್ವಾಹಕ ಪರವಾನಗಿಗಳು

3.1. ವರದಿ ಮಾಡುತ್ತಿರುವ 1994 ನೇ [illegible] ವರ್ಷದಲ್ಲಿ ಅಂದರೆ 1-4-94 ರಿಂದ 31-12-94 ರ ವರೆಗೆ ಒಟ್ಟು 1,40,935 ಚಾಲಕರ ಹೊಸ ಪರವಾನಗಿಗಳನ್ನು ನೀಡಲಾಗಿದೆ ಮತ್ತು 1,38,811 ಚಾಲಕರ ಪರವಾನಗಿಗಳನ್ನು ನವೀಕರಿಸಲಾಗಿದೆ. ಒಟ್ಟಾರೆ 27,27,753 ಚಾಲಕರ ಅನುಜ್ಞಾ ಪತ್ರಗಳು 31-12-94 ರ ಅಂತ್ಯದಂದು ಚಾಲ್ತಿಯಲ್ಲಿದ್ದವು.

ಹಾಗೆಯೇ 1994 ರಲ್ಲಿ 1-4-94 ರಿಂದ 31-12-94ರ ವರೆಗೆ ಒಟ್ಟು 25,032 ಹೊಸ ನಿರ್ವಾಹಕ ಪರವಾನಗಿಗಳನ್ನು ನವೀಕರಿಸಲಾಗಿದೆ. ಒಟ್ಟು 2,10,648 ನಿರ್ವಾಹಕ ಪರವಾನಗಿಗಳು 31-12-1994 ರ ಅಂತ್ಯದಂದು ಚಾಲ್ತಿಯಲ್ಲಿದ್ದವು. ಈ ಪರವಾನಗಿಗಳನ್ನು ನೀಡುವ ಬಗ್ಗೆ ಮತ್ತು ನವೀಕರಿಸುವ ಮೂಲಕ 8,44,790 ರೂ.ಗಳ ಕರವನ್ನು ವಸೂಲು ಮಾಡಲಾಗಿದೆ.

3.2 ಪ್ಲಾಸ್ಟಿಕ್ ಕಾರ್ಡ್ ಚಾಲಕರ ಪರವಾನಗಿಗಳು

ರಾಜ್ಯದ ಎಲ್ಲಾ ವಲಯಗಳಲ್ಲಿ ಮತ್ತು ಉಪ ವಲಯಗಳಲ್ಲಿ ದ್ವಿಚಕ್ರ ವಾಹನಗಳ ಮತ್ತು ಕಾರುಗಳ ಚಾಲಕರಿಗೆ ತಮ್ಮ ಪರವಾನಗಿ ಪತ್ರಗಳನ್ನು ಸುಲಭವಾಗಿ ತಮ್ಮ ಜೇಬುಗಳಲ್ಲಿ ಇಟ್ಟುಕೊಳ್ಳುವಂತಹ ಸಣ್ಣ ಆಕೃತಿಯ ಪ್ಲಾಸ್ಟಿಕ್ ಕಾರ್ಡ್ ಚಾಲಕರ ಪರವಾನಗಿ ಪತ್ರಗಳನ್ನು ನೀಡುವುದನ್ನು ಮುಂದುವರಿಸಲಾಗಿದೆ.

ಪ್ಲಾಸ್ಟಿಕ್ ಕಾರ್ಡ್ ಚಾಲಕರ ಪರವಾನಗಿ ಪತ್ರಗಳು ಈ ಕೆಳಕಂಡ ಕಾರಣಗಳಿಂದ ಜನಪ್ರಿಯವಾಗಿದೆ:—

1. ಇದೊಂದು ಆಧುನಿಕ ವಿಧಾನದ ಪರವಾನಗಿಯಾಗಿದೆ.
2. ಇದರಲ್ಲಿ ಪರವಾನಗಿ ದುರುಪಯೋಗ ಅಥವಾ ತಿದ್ದುವಿಕೆಗೆ ಆಸ್ಪದವಿಲ್ಲ.
3. ಪರವಾನಗಿ ಒದ್ದೆಯಾಗುವುದಿಲ್ಲ.
4. ಇದು ಗುರುತಿನ ಚೀಟಿಯಾಗಿಯೂ ಪ್ರಯೋಜನಕಾರಿಯಾಗಿದೆ.
5. ಅಪಘಾತಗಳ ತುರ್ತು ಸನ್ನಿವೇಶದಲ್ಲಿ ಚಾಲಕರ ವಿಳಾಸ ಮತ್ತು ರಕ್ತದ ಗುಂಪು ಗುರುತಿಸಲು ಇದು ಬಹಳ ಅನುಕೂಲವಾಗಿದೆ.

ಪ್ರಸಕ್ತ 1994 ನೇ ವರ್ಷದಲ್ಲಿ 1–4–94 ರಿಂದ 31–12–1994 ರ ವರೆಗೆ ಒಟ್ಟು 35,039 ದ್ವಿಚಕ್ರ ವಾಹನ ಚಾಲಕರು 8862 ಮೋಟಾರು ಕಾರಿನ ಚಾಲಕರು ಮತ್ತು 21595 ಮೋಟಾರು ಸೈಕಲ ಚಾಲಕರು ಈ ಯೋಜನೆಯನ್ನು ಉಪಯೋಗಿಸಿಕೊಂಡರು ಮತ್ತು 9,80,955 ರೂ.ಗಳನ್ನು ನಿಗಧಿಪಡಿಸಿದ ಶುಲ್ಕದೊಂದಿಗೆ ಪ್ಲಾಸ್ಟಿಕ್ ಕಾರ್ಡಗಳ ಬೆಲೆಯನ್ನು ವಸೂಲು ಮಾಡಲಾಗಿದೆ.

## 4. ಮೋಟಾರು ವಾಹನಗಳ ನೋಂದಣಿ

4.1. ಮೋಟಾರು ವಾಹನಗಳ ಕಾಯಿದೆ 1989 ಕಲಂ 39 ರ ಪ್ರಕಾರ ಎಲ್ಲಾ ಮೋಟಾರು ವಾಹನಗಳು ರಸ್ತೆಯ ಮೇಲೆ ಉಪಯೋಗಕ್ಕೆ ಬರುವ ಮೊದಲೇ ಕಡ್ಡಾಯವಾಗಿ ನೋಂದಣಿಯಾಗಿರಬೇಕು. ಮೋಟಾರು ವಾಹನ ಕಾಯಿದೆ 1988 ರ ಅಧ್ಯಾಯ 4 ರ ಪ್ರಕಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅವರವರ ವ್ಯಾಪ್ತಿಯಲ್ಲಿ ನೋಂದಣಿ ಪ್ರಾಧಿಕಾರಿಗಳಾಗಿರುತ್ತಾರೆ.

ರಾಜ್ಯದಲ್ಲಿ ದಿನಾಂಕ 31-12-1994 ರ ಅಂತ್ಯದ ವರೆಗೆ ಒಟ್ಟು 19,50,005 ಎಲ್ಲಾ ವರ್ಗಗಳ ಮೋಟಾರು ವಾಹನಗಳ ನೋಂದಣಿ ಉಪಯೋಗಕ್ಕಿದ್ದು, 31-12-93 ರ ಅಂತ್ಯದಂದು 17,63,713 ವಾಹನಗಳಿದ್ದುವು. ಆದರೆ ~~ಈ~~ ಅವಧಿಯಲ್ಲಿ ಶೇಕಡಾ 7.07 ವಾಹನ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗಿದೆ.

ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಮೋಟಾರು ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. 31-12-1994ರಂದು ವಿವಿಧ ಮೋಟಾರು ವಾಹನಗಳ ನೋಂದಣಿ ಮತ್ತು ಉಪಯೋಗಕ್ಕಿರುವ ವಾಹನಗಳ ವಿವರ ಹಾಗೂ 1-4-94 ರಂದು ಶೇಕಡಾ ಹೆಚ್ಚುವರಿ ವಾಹನಗಳ ವಿವರಗಳನ್ನು ಮತ್ತು ಜಿಲ್ಲಾವಾರು ಅನುಪಾತವನ್ನು ಈ ಕೆಳಗೆ ಕೊಟ್ಟಿದೆ.

| ಕ್ರಮ ಸಂಖ್ಯೆ | ಜಿಲ್ಲೆಗಳು | 1·4·94 ರಂದು ಮೋಟಾರು ವಾಹನಗಳ ಸಂಖ್ಯೆ | 31·12·1994 ರಂದು ಮೋಟಾರು ವಾಹನಗಳ ಸಂಖ್ಯೆ | ದಿನಾಂಕ 1·4·94 ರಿಂದ 31·12·94 ರ ಅವಧಿಯಲ್ಲಿ ಶೇಕಡಾವಾರು ಹೆಚ್ಚಳ | ಜಿಲ್ಲಾವಾರು ಮೋಟಾರು ವಾಹನಗಳ ಶೇಕಡ ಅನುಪಾತವಾರು ಹೆಚ್ಚಳ 1·4·94 ರಿಂದ 31·12·94 |
|---|---|---|---|---|---|
| 1· | ಬೆಂಗಳೂರು (ನಗರ & ಗ್ರಾಂ) | 6·96·473 | 7·73·904 | 10·00 | 39·68 |
| 2· | ಬೆಳಗಾಂ | 1·30·839 | 1·41·134 | 7·29 | 7·23 |
| 3· | ಬಳ್ಳಾರಿ | 50·586 | 54·615 | 7·38 | 2·80 |
| 4· | ಬೀದರ್ | 19·652 | 21·656 | 9·25 | 1·11 |
| 5· | ಬಿಜಾಪುರ | 52·546 | 55·867 | 7·63 | 2·92 |
| 6· | ಚಿಕ್ಕಮಗಳೂರು | 25·709 | 27·554 | 6·69 | 1·41 |
| 7· | ಚಿತ್ರದುರ್ಗ | 69·309 | 72·361 | 4·21 | 3·71 |
| 8· | ದಕ್ಷಿಣ ಕನ್ನಡ | 1·20·393 | 1·29·381 | 6·71 | 6·63 |
| 9· | ಧಾರವಾಡ | 1·17·863 | 1·26·275 | 6·66 | 6·47 |
| 10· | ಗುಲ್ಬರ್ಗಾ | 46·231 | 49·519 | 6·64 | 2·54 |
| 11· | ಹಾಸನ | 33·292 | 35·726 | 6·87 | 1·83 |
| 12· | ಕೊಡಗು | 20·647 | 22·075 | 6·46 | 1·13 |
| 13· | ಕೋಲಾರ | 47·558 | 51·535 | 7·71 | 2·64 |
| 14· | ಮಂಡ್ಯ | 27·408 | 30·279 | 9·48 | 1·55 |
| 15· | ಮೈಸೂರು | 1·38·114 | 1·45·890 | 5·33 | 7·48 |
| 16· | ರಾಯಚೂರು | 43·555 | 46·528 | 6·39 | 2·38 |
| 17· | ಶಿವಮೊಗ್ಗ | 69·381 | 74·120 | 6·39 | 3·80 |
| 18· | ತುಮಕೂರು | 48·171 | 52·501 | 8·24 | 2·69 |
| 19· | ಉತ್ತರ ಕನ್ನಡ | 34·035 | 38·065 | 10·58 | 1·95 |
| | | 18·12·092 | 19·50·005 | 7·07 | ಶೇ 100·00 |

31·12·1994 ರಂದು ಹಾಗೂ ಈ ಅವಧಿಯಲ್ಲಿ ಆದ ವಿವಿಧ ಮೋಟಾರು ವಾಹನಗಳ ಶೇಕಡಾವಾರು ಹೆಚ್ಚಳ ಮತ್ತು ಅನುಪಾತ ವಿವರಗಳನ್ನು ಈ ಕೆಳಕಂಡಂತೆ ಕೊಟ್ಟಿದೆ.

| ಕ್ರಮ ಸಂಖ್ಯೆ | ವಾಹನಗಳ ವಿವರ | 1·4·94 ರಂದು ಮೋಟಾರು ವಾಹನಗಳ ಸಂಖ್ಯೆ | 31·12·94 ರಂದು ಇದ್ದ ಮೋಟಾರು ವಾಹನಗಳ ಸಂಖ್ಯೆ | 1·4·94 ರಿಂದ 31·12·94 ರ ಶೇಕಡಾವಾರು ಹೆಚ್ಚಳ | 31·12·94 ರಂದು ವಾಹನಗಳ ಅನುಪಾತ |
|---|---|---|---|---|---|
| 1· | ಮೋಟಾರು ಸೈಕಲ್‌ಗಳು | 12·84·900 | 13·85·499 | 7·26 | 71·05 |
| 2· | ಮೋಟಾರ್ ಕಾರುಗಳು | 1·67·207 | 1·80·724 | 7·47 | 9·26 |
| 3· | ಜೀಪುಗಳು | 24·859 | 26·942 | 7·73 | 1·38 |
| 4· | ಮೋಟಾರ್ ಕ್ಯಾಬ್‌ಗಳು | 11·572 | 13·049 | 11·31 | 0·67 |
| 5· | ಆಟೋ ರಿಕ್ಷಾಗಳು | 73·775 | 79·144 | 6·78 | 4·06 |
| 6· | ಆಮ್ನಿ ಬಸ್ಸುಗಳು | 9·760 | 10·812 | 9·72 | 0·55 |
| 7· | ಮಂಡಳಿ ಗಾಡಿಗಳು· | | | | |
| | ಅ) ಕ·ರಾ·ರ·ಸಾ· ಸಂ· | 16·190 | 17·178 | 5·75 | 0·88 |
| | ಆ) ಖಾಸಗಿ | 4·047 | 4·455 | 9·15 | 0·23 |
| 8· | ಸರಕು ಸಾಗಾಣಿಕೆ ವಾಹನಗಳು | 81·869 | 82·637 | 0·93 | 4·24 |
| 9· | ಟ್ರ್ಯಾಕ್ಟರ್‌ಗಳು | 57·220 | 61·397 | 6·80 | 3·15 |
| 10· | ಟ್ರೈಲರ್‌ಗಳು | 59·252 | 62·801 | 5·65 | 3·23 |
| 11· | ಇತರೆ | 21·441 | 25·367 | 15·47 | 1·30 |
| | ಒಟ್ಟು | 18,12,092 | 19,50,005 | 7·07 | ಶೇ100·00 |

## 4.2 ಸಾರಿಗೆ ವಾಹನಗಳ ಅರ್ಹತಾ ಪತ್ರ :

ಮೋಟಾರು ವಾಹನಗಳ ಕಾಯ್ದೆ 1988 ರ ಕಲಂ 56 ರ ಪ್ರಕಾರ ಸಾರಿಗೆ ವಾಹನಗಳು ಸಾರ್ವಜನಿಕ ರಸ್ತೆಯಲ್ಲಿ ಉಪಯೋಗಿಸಲ್ಪಡುವ ಸಲುವಾಗಿ ಅರ್ಹ ಪ್ರಪತ್ರಗಳನ್ನು ಹೊಂದಿರಬೇಕು. ಆಗಿಂದಾಗ್ಗೆ ವಾಹನಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಹತಾ ಪ್ರಪತ್ರಗಳನ್ನು ಕೊಡಲಾಗುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತನಿಖಾ ಅಧಿಕಾರಿಗಳು ಮಾಡಿದ ಕೆಲವೊಂದು ವಾಹನಗಳನ್ನು ಮೇಲು ತಪಾಸಣೆ ಮಾಡುತ್ತಾರೆ.

31.12.1994 ರ ಅಂತ್ಯದವರೆಗೆ 18,489 ಅರ್ಹತಾ ಪ್ರಪತ್ರಗಳನ್ನು ನೀಡಲಾಗಿದೆ. 91,271 ಅರ್ಹತಾ ಪ್ರಪತ್ರಗಳನ್ನು ನವೀಕರಿಸಲಾಗಿದೆ ಮತ್ತು 91,50,283 ರೂಪಾಯಿಗಳ ಶುಲ್ಕವನ್ನು ವಸೂಲಿ ಮಾಡಲಾಗಿದೆ.

## 4.3 ಸಾರಿಗೇತರ ವಾಹನಗಳ ನೋಂದಣಿಯ ಪ್ರಪತ್ರಗಳನ್ನು ನವೀಕರಿಸುವಿಕೆ :

ಮೋಟಾರು ವಾಹನಗಳ ಕಾಯ್ದೆ 1988 ರ ಕಲಂ 41 ರ ಪ್ರಕಾರ ಕಾಯಿದೆಯ ಕಲಂ 39 ರಡಿಯಲ್ಲಿ ಸಾರಿಗೆ ವಾಹನಗಳನ್ನು ಬಿಟ್ಟು ಮೋಟಾರು ವಾಹನಗಳಿಗೆ ನೀಡುವ ನೋಂದಣಿ ಪ್ರಪತ್ರವು 15 ವರ್ಷಗಳವರೆಗೆ ಸಿಂಧುವಾಗಿರುತ್ತದೆ ಮತ್ತು ನಿಗದಿತ ಅವಧಿಯಲ್ಲಿ ನವೀಕರಿಸಬೇಕಾಗುತ್ತದೆ.

ಸಾರಿಗೇತರ ವಾಹನಗಳ ಮಾಲೀಕರಿಂದ ನೋಂದಣಿ ಪ್ರಪತ್ರದ ನವೀಕರಣಗೆ ಯಾಂತ್ರಿಕ ಪರಿಸ್ಥಿತಿಯನ್ನು ಪರಿಶೀಲಿಸಿ ತೃಪ್ತಿಕರ ವಾಗಿದ್ದಲ್ಲಿ ಐದು ವರ್ಷಗಳ ಅವಧಿಗೆ ನವೀಕರಣ ಪ್ರಪತ್ರ ನೀಡಲಾಗುತ್ತದೆ.

ರಾಜ್ಯದಲ್ಲಿ 1.4.94 ರಿಂದ 31.12.94 ರವರೆಗೆ 73,504 ನೋಂದಣಿ ಪ್ರಪತ್ರಗಳನ್ನು ನವೀಕರಿಸಲಾಗಿದೆ. ಮತ್ತು 8,86,017 ರೂಪಾಯಿಗಳ ಶುಲ್ಕವನ್ನು ವಸೂಲಿ ಮಾಡಲಾಗಿದೆ.

5.0 ಸಾರಿಗೆ ವಾಹನಗಳ ನಿಯಂತ್ರಣ :

5.1 ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ :

ಮೋಟಾರು ವಾಹನಗಳ ಕಾಯ್ದೆ 1988 ರ ಕಲಂ 68 ರ ಉಪ ಕಲಂ (1) ಮತ್ತು (2) ರ ಪ್ರಕಾರ 1989 ರಲ್ಲಿ (1988 ರ ಕೇಂದ್ರ ಕಾಯಿದೆ 59) ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾಗಿ ಸಾರಿಗೆ ಆಯುಕ್ತರನ್ನೊಳಗೊಂಡ ಇತರೆ ಎರಡು ಜನ ಅಧಿಕಾರಿ ಸದಸ್ಯರುಗಳಿರುವ ಕರ್ನಾಟಕ ಸಾರಿಗೆ ಪ್ರಾಧಿಕಾರವು ಅಧಿಸೂಚನೆ ಸಂಖ್ಯೆ: ಎಚ್‌ಟಿಡಿ 77 ಟಿಎಂಎಂ 89, ದಿನಾಂಕ 1.7.89 ರ ಪ್ರಕಾರ ರಚಿಸಲ್ಪಟ್ಟಿದೆ. ಕರ್ನಾಟಕ ಸಾರಿಗೆ ಪ್ರಾಧಿಕಾರವು ಕಾರ್ಯತಃ ನ್ಯಾಯಾಂಗವಾಗಿ ಮೋಟಾರು ವಾಹನಗಳ ಕಾಯ್ದೆ 1988 ರೀತ್ಯಾ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುತ್ತದೆ.

ಈ ಪ್ರಾಧಿಕಾರವು ಪ್ರವಾಸಿ ವಾಹನಗಳಿಗೆ, ಮೋಟಾರು ಬಸ್ಸುಗಳಿಗೆ, ಬಾಡಿಗೆ ಕಾರುಗಳಿಗೆ ಅಂತರರಾಜ್ಯ ಹಾಗೂ ರಾಜ್ಯದ್ಯಂತ ವಲಯಗಳನ್ನೊಳಗೊಂಡಂತೆ ಪರಸ್ಪರ ಹೊಂದಾಣಿಕೆ ಆಧಾರದ ಮೇಲೆ ರಾಜ್ಯಗಳ ನಡುವೆ ಅಂತರರಾಜ್ಯ ಒಪ್ಪಂದದ ಪ್ರಕಾರ ರಹದಾರಿಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿದೆ. ಈ ಪ್ರಾಧಿಕಾರವು ಮೋಟಾರು ವಾಹನಗಳ ಕಾಯ್ದೆ ಕಲಂ 86 ರ ಪ್ರಕಾರ ಪರವಾನಗಿ ಷರತ್ತುಗಳನ್ನು ಉಲ್ಲಂಘಿಸಿದ ವಾಹನಗಳ ಪರವಾನಗಿ ಪತ್ರಗಳನ್ನು ವಜಾ ಮಾಡುವ ಅಧಿಕಾರ ಹೊಂದಿದೆ ಅಥವಾ ಮಾಲೀಕರು ಒಪ್ಪಿದರೆ ದಂಡವನ್ನು ಸಂದಾಯ ಮಾಡಿ ಈ ಕ್ರಮವನ್ನು ತಪ್ಪಿಸಿಕೊಳ್ಳಬಹುದು.

5·1·2 <u>ಪರಸ್ಪರ ಒಪ್ಪಂದ</u>

ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಮಧ್ಯಪ್ರದೇಶ, ಗೋವಾ ಮತ್ತು ದೆಹಲಿ ರಾಜ್ಯಗಳೊಂದಿಗೆ ಪರಸ್ಪರ ಒಪ್ಪಂದದನ್ವಯ ಆದ 'ಏರ್ಪಾಡು ಈ ವರ್ಷದಲ್ಲೂ ಮುಂದುವರೆಸಲಾಯಿತು·

5·1·3 <u>ಸಪ್ಲಿಮೆಂಟಲ್ ಅಗ್ರಿಮೆಂಟ್</u>

ಅಧಿಸೂಚನೆ ಸಂಖ್ಯೆ ಎಫ್‌ಟಿಡಿ 4 ಟಿಎಂಇ 92, ದಿನಾಂಕ 10·12·1993 ರಲ್ಲಿ ಕರ್ನಾಟಕ ಸರ್ಕಾರವು ಕೇರಳ ಸರ್ಕಾರದೊಂದಿಗೆ ಎರಡನೇ ಅಂತಿಮ ಒಪ್ಪಂದವನ್ನು ಮಾಡಿಕೊಂಡಿದೆ·

5·2 <u>ದಕ್ಷಿಣ ವಲಯ ಯೋಜನೆ</u>

5·2·1 ದಕ್ಷಿಣ ವಲಯ ರಹದಾರಿಗಳ ಒಪ್ಪಂದದ ಮೇರೆಗೆ 400 ಪ್ರವಾಸಿ ರಹದಾರಿಗಳನ್ನು ಕರ್ನಾಟಕ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಗೋವಾ ಮತ್ತು ಪಾಂಡಿಚೆರಿ ರಾಜ್ಯಗಳೊಡನೆ ಪ್ರವಾಸಿ ಟ್ಯಾಕ್ಸಿಗಳಿಗೆ ಮೇಲು ರುಜುವಿಲ್ಲದೇ 'ಏಕ ಮುಖ ತೆರಿಗೆ ಪಾವತಿ ಮಾಡುವ ವ್ಯವಸ್ಥೆ ಮುಂದುವರೆಯಿತು·

ಅಂತರ ರಾಜ್ಯ ಒಪ್ಪಂದದ ಅನ್ವಯ ಪ್ರಯಾಣಿಕರ ಸಾರಿಗೆ ವ್ಯವಸ್ಥೆ ಪರವಾನಗಿ ನೀಡಿರುವುದು ಈ ಕೆಳಕಂಡಂತಿದೆ :–

6147-3

| ಕ್ರಮ ಸಂಖ್ಯೆ | ರಾಜ್ಯಗಳು | ಒಪ್ಪಂದವಾದ ಪರ್ಮಿಟ | 1.4.94ರಿಂದ 31.12.94ರ ವರೆಗೆ ನೀಡಲಾದ ಹೊಸ ರಹದಾರಿಗಳು | 31.12.94 ರವರೆಗೆ ಬಳಸ್ಸು ಚಾಲ್ತಿಯಲ್ಲಿ ಇರುವ ರಹದಾರಿಗಳು | 31.12.94ರ [illegible] ರಹದಾರಿಗಳು |
|---|---|---|---|---|---|
| 1 | 2 | 3 | 4 | 5 | |
| **ಪ್ರಯಾಣಿಕರ ಸೇವಾ ವಾಹನಗಳು (ಮಂಜಿಲು ಗಾಡಿಗಳು)** | | | | | |
| 1. | ಕರ್ನಾಟಕ ತಮಿಳುನಾಡು (ಪಾಂಡಿಚೇರಿ ಸೇರಿ) | 46 | 12 | 180 | 257 |
| 2. | ಕರ್ನಾಟಕ –ಕೇರಳ | 64 | 60 | 276 | 124 |
| 3. | ಕರ್ನಾಟಕ ಆಂಧ್ರಪ್ರದೇಶ | 287 | 57 | 587 | 464 |
| 4. | ಕರ್ನಾಟಕ–ಮಹಾರಾಷ್ಟ್ರ | 165 | 21 | 90 | — |
| 5. | ಕರ್ನಾಟಕ –ಗುಜರಾತ | 23 | 4 | 27 | 12 |
| **ಪ್ರವಾಸಿ ಟ್ಯಾಕ್ಸಿಗಳು** | | | | | |
| 1. | ಕರ್ನಾಟಕ –ತಮಿಳುನಾಡು | 300 | 100 | 246 | [illegible] |
| 2. | ಕರ್ನಾಟಕ – ಕೇರಳ | 250 | — | 81 | [illegible] |
| 3. | ಕರ್ನಾಟಕ – ಗುಜರಾತ | 70 | 4 | 74 | 21 |
| 4. | ಕರ್ನಾಟಕ –ಆಂಧ್ರಪ್ರದೇಶ | 400 | 350 | 350 | 60 |
| 5. | ಕರ್ನಾಟಕ –ಮಹಾರಾಷ್ಟ್ರ | 25 | — | 22 | 14 |

5.2.2: ಒಪ್ಪಂದ ವಾಹನ ರಹದಾರಿಗಳು (ಬಸ್ಸುಗಳು)

31-12-94 ಅಂತ್ಯದವರೆಗೆ ಮೇಲ್ಕಾಣಿಸಿದ ರಹದಾರಿಗಳ ಜೊತೆಗೆ 21 ಅಂತರರಾಜ್ಯ ಒಪ್ಪಂದ ರಹದಾರಿಗಳ ಪ್ರಕಾರ 21 ಬಸ್ಸುಗಳು ಮತ್ತು 250 ಅಂತರರಾಜ್ಯ ಒಪ್ಪಂದ ವಾಹನಗಳ ಪರವಾನಿಗೆಯಂತೆ 250 ವಾಹನಗಳು ಕರ್ನಾಟಕ ರಾಜ್ಯದಲ್ಲಿ ಚಾಲ್ತಿಯಲ್ಲಿದೆ.

5.2.3: ಪ್ರವಾಸಿ ವಾಹನಗಳು:

31-12-1994 ರ ಅಂತ್ಯದವರೆಗೆ 883 ಪ್ರವಾಸಿ ಅಖಿಲ ಬಸ್ಸುಗಳು ಮತ್ತು 1456 ಪ್ರವಾಸಿ ಮೋಟಾರು ಕ್ಯಾಬ ರಹದಾರಿಗಳು ಚಾಲ್ತಿಯಲ್ಲಿದೆ.

5.2.4. ಮ್ಯಾಕ್ಸಿ ಕ್ಯಾಬಗಳು:

1499 ಅಖಿಲ ಭಾರತ ಟೂರಿಸ್ಟ ಮ್ಯಾಕ್ಸಿ ಕ್ಯಾಬಗಳ ರಹದಾರಿಗಳು 8534 ರಾಜ್ಯ ರಹದಾರಿ ಮ್ಯಾಕ್ಸಿ ಕ್ಯಾಬಗಳು ಚಾಲ್ತಿಯಲ್ಲಿವೆ.

6. ಸರಕು ಸಾಗಣೆ ವಾಹನಗಳು:

6.1. ಅಂತರರಾಜ್ಯ ರಹದಾರಿಗಳು:

ಅಂತರರಾಜ್ಯಗಳೊಂದಿಗೆ ಅಂದರೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶ ಕೇರಳ ಹಾಗೂ ಗೋವಾ ರಾಜ್ಯದೊಂದಿಗೆ ಮಾಡಿಕೊಂಡ ಒಪ್ಪಂದಗಳು ಈ ವರ್ಷವೂ ಮುಂದುವರೆದಿದೆ. ಕೇರಳ ಮತ್ತು ಆಂಧ್ರಪ್ರದೇಶ ವಾಹನಗಳಿಗೆ ಏಕಸಮಯ ತೆರಿಗೆ ತಪ್ಪಿಸಿ ವರ್ಷಕ್ಕೆ 1500-00 ರೂ. ತೆರಿಗೆಯನ್ನು ವಿಧಿಸಲು ಮಾಡಿಕೊಂಡ ಒಪ್ಪಂದವೂ ಸಹ ಈ ವರ್ಷದಲ್ಲಿ ಮುಂದುವರಿಸಲಾಗಿದೆ. ಕರ್ನಾಟಕ ಸರ್ಕಾರವು ಕೇರಳ ಸರ್ಕಾರದೊಂದಿಗೆ 2 ನೇ ಪೂರಕ ಒಪ್ಪಂದವನ್ನು ಈ ವರ್ಷ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ ಸರಕು ಸಾಗಾಣಿಕೆ ವಾಹನಗಳ ತೆರಿಗೆಯನ್ನು 1-4-93 ರಿಂದ ಜಾರಿಗೆ ಬರುವಂತೆ ರೂ.500-00 ಗಳಿಂದ

ಕೇರಳದೊಂದಿಗೆ ಕರ್ನಾಟಕವು ಪೂರಕ ಒಪ್ಪಂದಕ್ಕೆ ಈ ವರ್ಷದಲ್ಲಿ ಬಂದಿದೆ.

6.2. ಅಂತರರಾಜ್ಯ ಒಪ್ಪಂದದ ಮೇರೆಗೆ ನೆರೆ ರಾಜ್ಯಗಳೊಡನೆ ಮಾಡಿಕೊಂಡ ಒಪ್ಪಂದದಂತೆ ನೀಡಲಾದ ಸರಕು ಸಾಗಾಣಿಕೆ ವಾಹನಗಳ ರಹದಾರಿಗಳನ್ನು ಈ ತಖ್ತೆ ಕೆಳಕಂಡಂತೆ ತೋರಿಸಿದೆ:—

—: ಸರಕು ಸಾಗಾಣಿಕೆ ವಾಹನಗಳು:—

| ಕ್ರಮ ಸಂಖ್ಯೆ | ರಾಜ್ಯಗಳು | ಒಪ್ಪಿಕೊಂಡ ಸಂಖ್ಯೆ | 1—4—94 ರಿಂದ 31—12—94 ರವರೆಗೆ ಹೊಸ ರಹದಾರಿ ನೀಡಿರುವುದು | 31—12—94 ಕ್ಕೆ ನವೀಕರಿಸಿದ ಕೊಡಲ್ಪಟ್ಟ ಹಾಗೂ ಹೊಸದಾಗಿ ಚಾಲ್ತಿಯಲ್ಲಿರುವ ಒಟ್ಟು ರಹದಾರಿಗಳು | ಬೇರೆರಾಜ್ಯಗಳಿಂದ ಕೊಡಲ್ಪಟ್ಟ ನವೀಕರಿಸಲ್ಪಟ್ಟ ಮೇಲುರುಜು ಮಾಡಿರುವ ಒಟ್ಟು ಚಾಲ್ತಿಯಲ್ಲಿರುವ ರಹದಾರಿಗಳು (31—12—94ರಲ್ಲಿದ್ದಂತೆ) |
|---|---|---|---|---|---|
| 1 | 2 | 3 | 4 | 5 | 6 |
| 1. | ಕರ್ನಾಟಕ— ತಮಿಳುನಾಡು | 3650 | 780 | 3650 | 3415 |
| 2. | ಕರ್ನಾಟಕ ಆಂಧ್ರಪ್ರದೇಶ | 10000 | 1186 | 6375 | 8517 |
| 3. | ಕರ್ನಾಟಕ ಮಹಾರಾಷ್ಟ್ರ | 9000 | 1375 | 7220 | 7890 |
| 4. | ಕರ್ನಾಟಕ ಮಧ್ಯಪ್ರದೇಶ | 50 | — | 17 | 13 |
| 5. | ಕರ್ನಾಟಕ ಕೇರಳ | 1500 | 234 | 1410 | 1247 |
| 6. | ಕರ್ನಾಟಕ ದೆಹಲಿ | 50 | — | — | — |
| 7. | ಕರ್ನಾಟಕ ಗೋವಾ | 800 | 86 | 800 | 774 |

6.3. ರಾಷ್ಟ್ರೀಯ ರಹದಾರಿಗಳು (ಸರಕು ಸಾಗಾಣೆ ವಾಹನಗಳು)

ವಲಯ ರಹದಾರಿಗಳನ್ನು ರದ್ದುಪಡಿಸಿ ರಾಷ್ಟ್ರೀಯ ರಹದಾರಿ ಪದ್ಧತಿಯನ್ನು ಸಡಿಲಗೊಳಿಸಿರುವುದರಿಂದ ದಿನಾಂಕ:1.4.94 ರಿಂದ 31.12.94ರವರೆಗೆ 1784 ರಹದಾರಿಗಳನ್ನು ನೀಡಲಾಗಿದೆ ಮತ್ತು 31.12.94ರ ಅಂತ್ಯದವರೆಗೆ 10505 ರಾಷ್ಟ್ರೀಯ ರಹದಾರಿಗಳು ಚಾಲ್ತಿಯಲ್ಲಿವೆ.

1988 ಹೊಸ ಮೋಟಾರು ವಾಹನ ಕಾಯ್ದೆಯನ್ವಯದಲ್ಲಿ 5 ರಾಜ್ಯಗಳ ಬದಲು 4 ರಾಜ್ಯಗಳ ಮಿತಿಯನ್ನು ಅಳವಡಿಸಲಾಗಿದೆ.

6.4. ಪ್ರಾದೇಶಿಕ ಸಾರಿಗೆ ಪ್ರಾಧಿಕಾರ:

ಮೋಟಾರು ವಾಹನ ಕಾಯ್ದೆ 1988ರ ಕಲಂ 68ರ ಪ್ರಕಾರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರಾಗಿಯೂ, ಆರಕ್ಷಕ ಅಧೀಕ್ಷಕರನ್ನು ಸದಸ್ಯರನ್ನಾಗಿಯೂ ಆಯಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನೇಮಕವಾಗಿರುತ್ತಾರೆ. ಸಂಬಂಧಪಟ್ಟ ಜಿಲ್ಲೆಯ ಮತ್ತು (ತಾಲ್ಲೂಕಿನ) ಪ್ರಾದೇಶಿಕ ಸಾರಿಗೆ ಅಧಿಕಾರಿಯು ಎಕ್ಸ್ ಅಫಿಸಿಯೋ ಕಾರ್ಯದರ್ಶಿಯಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಾರೆ.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕಾರ್ಯತಃ: ಸ್ವಾಯತ್ತವಾದಂಗವಾಗಿದ್ದು, ಜಿಲ್ಲೆ ಮತ್ತು ರಾಜ್ಯದೊಳಗೆ ಸಾರಿಗೆ ವಾಹನಗಳ ರಹದಾರಿಗಳನ್ನು ಮಂಜೂರು ಮಾಡುತ್ತದೆ. ರಹದಾರಿ ನೀಡಿದ ಹಾಗೂ 31.12.1994ರಂದು ಚಾಲ್ತಿಯಲ್ಲಿರುವ ವಿವರಗಳು ಕೆಳಗಿದೆ:

| ಕ್ರಮ ಸಂಖ್ಯೆ | ವಾಹನಗಳ ವರ್ಗ | 1-4-94 ರಿಂದ 31-12-94 ರ ಹೊಸದಾಗಿ ರಹದಾರಿಗಳು | ನವೀಕರಿಸಲಾದ ರಹದಾರಿಗಳ ಸಂಖ್ಯೆ 1-4-94ರಿಂದ 31-12-94ರ ವರೆಗೆ | 31-12-94ರಲ್ಲಿ ಜಾರಿಯಲ್ಲಿರುವ ರಹದಾರಿಗಳು ಒಟ್ಟು ರಹದಾರಿಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1. | ಪ್ರಯಾಣಿಕರ ವಾಹನಗಳು (ಸ್ಟೇಜ್‌ಕ್ಯಾರೇಜ್) | 4467 | 435 | 4539 |
| 2. | ಮೋಟಾರು ಕ್ಯಾಬ್‌ಗಳು | 12052 | 1747 | 12774 |
| 3. | ಆಟೋರಿಕ್ಷಾಗಳು | 68119 | 8680 | 74521 |
| 4. | ಸರಕು ಸಾಗಾಣಿಕೆ ವಾಹನಗಳು | 102634 | 13430 | 107593 |
| 5. | ಮ್ಯಾಕ್ಸಿಕ್ಯಾಬ್‌ಗಳು | 354 | 122 | 458 |
| 6. | ಪ್ರೈವೇಟ್ ಸರ್ವೀಸ್ ವಾಹನಗಳು | 3050 | 250 | 3301 |

7. ಪ್ರವರ್ತನ:-

7.1. ಇಲಾಖಾ ಶಾಸನ ಬದ್ಧ ಕ್ರಮದ ಪ್ರಕರಣಗಳು:

ಮೋಟಾರು ವಾಹನ ಕಾಯ್ದೆ 1988 ಕಲಂ 86 ರ ಪ್ರಕಾರ ರಹದಾರಿ ನೀಡಿದ ಸಾರಿಗೆ ಪ್ರಾಧಿಕಾರವೇ ರಹದಾರಿ ನಿಯಮಗಳನ್ನು ಉಲ್ಲಂಘನೆ ಮಾಡಿದ ರಹದಾರಿಗಳನ್ನು ಅಮಾನತ್ತು ಅಥವಾ ವಜಾ ಮಾಡುತ್ತಾರೆ.

ರಹದಾರಿ ಪಡೆದವರು ವಜಾ ಅಥವಾ ಅಮಾನತ್ತು ಆಗುವ ರಹದಾರಿಗಳಿಗೆ, ಬದಲು ಒಪ್ಪಂದ ಮುಖೇನ ಸಾರಿಗೆ ಪ್ರಾಧಿಕಾರವು ವಿಧಿಸಿದ ನಿರ್ದಿಷ್ಟ ಹಣವನ್ನು ಪಾವತಿ ಮಾಡಲು ಅನುಮತಿ ನೀಡಬಹುದು ಮತ್ತು ಮೇಲ್ಕಂಡ ಒಪ್ಪಂದದ ಮೇರೆಗೆ ರಾಜೀ ಶುಲ್ಕವನ್ನು ವಸೂಲಿ ಮಾಡಬಹುದು.

1994 ನೇ ವರ್ಷದಲ್ಲಿ 1–4–94 ರಿಂದ 31–12–94 ರ ಅಂತ್ಯದವರೆಗೆ ಪ್ರಾರಂಭವಾದ ಪ್ರಕರಣ, ವಿಲೇವಾರಿ, ರಾಜೀ ಶುಲ್ಕವನ್ನು ವಸೂಲಿ ಮಾಡಿದ ವಿವರಗಳು ಈ ಕೆಳಕಂಡಂತಿದೆ.

| ಪ್ರಾರಂಭ ಶುಲ್ಕ | ಹೊಸ ಪ್ರಕರಣ ಸ್ವೀಕೃತಿ | | ವಿಲೇವಾರಿಯಾದ ಪ್ರಕರಣಗಳು | ಬಾಕಿ | ಮೋಟಾರು ವಾಹನ ಕಾಯ್ದೆಯ ಕಲಂ 86 ರ ಪ್ರಕಾರ ವರ್ಷದಲ್ಲಿ ವಸೂಲಾದ ರಾಜೀ ಶುಲ್ಕ |
|---|---|---|---|---|---|
| 55819 | 101430 | 1,56,450 | 88231 | 68219 | 1,54,78,937 |

7.2. ಮೋಟಾರು ವಾಹನ ಕಾಯಿದೆ 1988 ರ ಕೇಂದ್ರ ಮೋಟಾರು ವಾಹನ ನಿಯಮ 1989 ಮತ್ತು, ಕರ್ನಾಟಕ ಮೋಟಾರು ವಾಹನ ನಿಯಮ 1989 ಮತ್ತು, ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957 ರ ಮೇರೆಗೆ ಕಾನೂನು ಉಲ್ಲಂಘನೆ ಮಾಡಿದವರ ಮೇಲೆ ಮೋಟಾರು ವಾಹನ ಇಲಾಖೆಯ ಪ್ರವರ್ತನಾಧಿಕಾರಿಗಳು ಹಲವಾರು ಬಗೆಯ ಅಪರಾಧಗಳಿಗೆ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಿದ್ದಾರೆ.

1994 ನೇ ಸಾಲಿನಲ್ಲಿ 1–4–94 ರಿಂದ 31–12–94 ರವರೆಗೆ ವಿಲೇವಾರಿಯಾದ ಪ್ರಕರಣಗಳು ಮತ್ತು ದಂಡ ವಸೂಲಾತಿಯನ್ನು ಈ ಕೆಳಕಂಡಂತೆ ಕೊಡಲಾಗಿದೆ(1–4–94 ರಿಂದ 31–12–1994)

| ಆರಂಭ ಶಿಲ್ಕು | ಪ್ರಕರಣಗಳು ಸ್ವೀಕೃತಿ | ಒಟ್ಟು | ವಿಲೇವಾರಿಯಾದ ಪ್ರಕರಣಗಳು | ಬಾಕಿ | ಒಟ್ಟು ವಸೂಲಾದ ದಂಡ |
|---|---|---|---|---|---|
| 24,910 | 51,843 | 73954 | 47,033 | 28,921 | 19248209 |

COMMUNITY HEALTH CELL
LIBRARY AND DOCUMENTATION UNIT
RB N95
04147

7.3. ತನಿಖಾ ಮಾಡಿದ ಸ್ಥಳದಲ್ಲಿಯೇ ರಾಜಿಯಾದ ಪ್ರಕರಣಗಳು:

ಮೋಟಾರು ವಾಹನ ಕಾಯ್ದೆ 1988ರ ಕಲಂ 200(2)ರ ಪ್ರಕಾರ ತಪ್ಪಿತಸ್ಥರು ತನಿಖಾ ಸ್ಥಳದಲ್ಲಿಯೇ ತಪ್ಪೊಪ್ಪಿಕೊಳ್ಳಲು ಇಚ್ಛಿಸಿದರೆ ನ್ಯಾಯಾಲಯದ ಮುಂದೆ ಹಾಜರಾಗುವ ಆವಶ್ಯಕತೆ ಇರುವುದಿಲ್ಲ. ಸ್ಥಳದಲ್ಲಿಯೇ ತಪ್ಪೊಪ್ಪಿಕೊಳ್ಳದಿದ್ದರೆ ಅಂತಹ ತಪ್ಪಿತಸ್ಥರ ಮೇಲೆ ನ್ಯಾಯಾಲಯದಲ್ಲಿ ಅಭಿಯೋಜನಾ ಪ್ರಕರಣಗಳನ್ನು ಮಾಡಲಾಗುವುದು. 1-4-94 ರಿಂದ 31-12-94ರವರೆಗೆ ಈ ಯೋಜನೆಯ ಮೇರೆಗೆ ರಾಜೀಯಾದ ಪ್ರಕರಣಗಳ ಮತ್ತು ವಸೂಲಾದ ಮೊತ್ತ ಈ ಕೆಳಕಂಡಂತಿದೆ:

| ಕ್ರ. ಸಂ. | ಪ್ರಾಧಿಕಾರ | ನೋಂದಾಯಿಸಲಾದ ಪ್ರಕರಣಗಳ ಸಂಖ್ಯೆ | ವಸೂಲಾದ ರಾಜಸ್ವ ರೂ.ಗಳು |
|---|---|---|---|
| 1. | ಪ್ರಾದೇಶಿಕ ಸಾರಿಗೆ ಕಛೇರಿಗಳು | 82,429 | 3,49,51,757 |

7.4. ಗಡಿ ತನಿಖಾ ಠಾಣೆ:

ಮೋಟಾರು ವಾಹನ ಕಾಯ್ದೆ 1988ರ ನಿಯಮಗಳನ್ನು ಜಾರಿಗೊಳಿಸಲು ಮತ್ತು ತೆರಿಗೆ ಆದಾಯ ಸೋರುವಿಕೆಯನ್ನು ತಡೆಗಟ್ಟುವ ಸಲುವಾಗಿ 11 ಚೆಕ್‌ಪೋಸ್ಟ್‌ಗಳನ್ನು ಕಾರ್ಯ ನಿರ್ವಹಿಸುತ್ತಿವೆ. 1994ನೇ ವರ್ಷದ ಅವಧಿಯಲ್ಲಿ 1-4-94 ರಿಂದ 31-12-94ವರೆಗೆ ಪ್ರತಿಯೊಂದು ತನಿಖಾ ಕೇಂದ್ರಗಳಲ್ಲಿಯೂ ದಾಖಲಾದ ಪ್ರಕರಣಗಳು ಮತ್ತು ವಸೂಲಾದ ಕಂದಾಯ ವಿವರಗಳು ಈ ಕೆಳಕಂಡಂತೆ ಇದೆ:-

| ಕ್ರ. ಸಂ. | ತನಿಖಾ ಠಾಣೆಯ ಹೆಸರು ಮತ್ತು ಜಿಲ್ಲೆ | ಪ್ರಾರಂಭಿಸಿದ ದಿನಾಂಕ ಮತ್ತು ಸ್ಥಳಗಳು | ದಾಖಲಾದ ಪ್ರಕರಣಗಳ ಸಂಖ್ಯೆ 1-4-94 ರಿಂದ 31-12-94 | ಒಟ್ಟು ವಸೂಲಾದ ರಾಜಸ್ವ (ಲಕ್ಷ ರೂ.ಗಳ |
|---|---|---|---|---|
| 01. | ಅತ್ತಿಬೆಲೆ (ಬೆಂಗಳೂರು) | 05-01-85 | 208 | 139.39 |
| 02. | ಬಾಗೇಪಲ್ಲಿ (ಕೋಲಾರ) | 01-11-89 | 3912 | 50.79 |
| 03. | ನಂಗಲಿ (ಕೋಲಾರ) | 01-11-89 | 2855 | 60.25 |
| 04. | ಗೌರಿಬಿದನೂರು (ಕೋಲಾರ) | 19-12-90 | 506 | 4.79 |
| 05. | ಗುಂಡ್ಲುಪೇಟೆ (ಮೈಸೂರು) | 01-12-84 | 497 | 87.56 |
| 06. | ತಲಪಾಡಿ (ಮಂಗಳೂರು) | 01-12-84 | 4729 | 55.07 |
| 07. | ಕಾಗಿನೆಲೆ (ಬೆಳಗಾವಿ) | 09-11-84 | 22332 | 141.58 |
| 08. | ಜತ್ತ (ಬಿಜಾಪುರ) | 05-12-84 | 27104 | 163.53 |
| 09. | ಹುಮ್ನಾಬಾದ್ (ಬೀದರ್) | 26-11-84 | — | 28.01 |
| 10. | ರಾಮನಗರ (ಉ.ಕನ್ನಡ) | 22-12-89 | 578 | 12.86 |
| 11. | ಆಲಂದ (ಗುಲ್ಬರ್ಗಾ) | 12-05-92 | 630 | 12.87 |
| | ಒಟ್ಟು | | 63,451 | 756.70 |

7.5. <u>ಕಡ್ಡಾಯ ವಿಮೆ</u>:

ಮೋಟಾರು ವಾಹನ ಕಾಯಿದೆ 1988 ಅಧ್ಯಾಯ 4 ರ ಪ್ರಕಾರ ವಾಹನ ನೋಂದಣಿಯಾಗುವಾಗ ತೆರಿಗೆ ಕಟ್ಟುವಾಗ ಪ್ರಪತ್ರ ನವೀಕರಿಸುವಾಗ ವಾಹನ ಮಾಲೀಕತ್ವ ವರ್ಗಾವಣೆ ಮಾಡುವಾಗ ಕಂತು ಖರೀದಿ ಕರಾರನ್ನು ದಾಖಲಿಸುವಾಗ ವಜಾ ಮಾಡುವಾಗ ರಹದಾರಿ ನೀಡುವಾಗ, ನವೀಕರಿಸುವಾಗ ಮತ್ತು ತನಿಖೆ ನಡೆಸುವಾಗ ಸಿಂಧುವಾದ ವಿಮಾ ಪ್ರಪತ್ರವನ್ನು ಹಾಜರುಪಡಿಸುವಂತೆ ಎಲ್ಲಾ ಮೋಟಾರು ವಾಹನಗಳಿಗೆ ಕಡ್ಡಾಯ ಗೊಳಿಸಲಾಗಿದೆ.

7.6. <u>ಮೋಟಾರು ಆಕ್ಸಿಡೆಂಟ್ ಕ್ಲೇಮ್ ಟ್ರಿಬ್ಯೂನಲ್</u>:

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಮೋಟಾರು ವಾಹನ ಅಪಘಾತಗಳಿಂದ ನ್ಯಾಯಾಧಿಕರಣ ಮೂಲಕ ಬರಬಹುದಾದ ಕ್ಲೈಮುಗಳನ್ನು ತೀರ್ಮಾನಿಸುತ್ತಾರೆ.

8. <u>ತೆರಿಗೆ</u>:

8.1. ಕಲಂ (3) ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯಿದೆ 1957 ರ ಮೇರೆಗೆ ರಸ್ತೆಗಳ ಮೇಲೆ ಉಪಯೋಗಿಸಲು ಅರ್ಹವಿರುವ ಎಲ್ಲಾ ಮೋಟಾರು ವಾಹನಗಳಿಗೂ ತೆರಿಗೆಯನ್ನು ವಿಧಿಸಲು ಸರ್ಕಾರಕ್ಕೆ ಅಧಿಕಾರವಿದೆ.

8.2. ಐದು ನೂರು ಮತ್ತು ಮೇಲ್ಪಟ್ಟ ಸಾರಿಗೆ ವಾಹನಗಳನ್ನು ಹೊಂದಿರುವ ಫ್ಲೀಟ್ ಮಾಲೀಕರಿಗೆ ಸಾರಿಗೆ ಆಯುಕ್ತರು ತೆರಿಗೆ ವಿಧಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯದಲ್ಲಿ ಈ ರೀತಿಯ ಒಂದೇ ಒಂದು ಫ್ಲೀಟ್ ಮಾಲೀಕರಾಗಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅವರವರ ವಿಭಾಗದಲ್ಲಿ ಮೇಲಿನ ವಾಹನಗಳ ವಿನಃ ಇತರೆ ಮೋಟಾರು ವಾಹನಗಳ ತೆರಿಗೆ ಅಧಿಕಾರಿಗಳಾಗಿರುತ್ತಾರೆ. ಈಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯದಲ್ಲಿ ಏಕಮೇವ ಫ್ಲೀಟ್ ಮಾಲೀಕರಾಗಿದೆ.

8·3 <u>ತೆರಿಗೆ ಪಾವತಿಯ ಸೌಲಭ್ಯಗಳು</u> :

ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ನೇರವಾಗಿ ವಾಹನ ತೆರಿಗೆಯನ್ನು ಪಾವತಿ ಮಾಡಲು ಸೌಲಭ್ಯವನ್ನು ಕಲ್ಪಿಸಲಾಗಿದೆ· ಜೊತೆಗೆ ಎಲ್ಲಾ ಪ್ರಾದೇಶಿಕ ಸಾರಿಗೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ತೆರಿಗೆ ಪಾವತಿ ಮಾಡುವವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಖಜಾನೆಗಳನ್ನು ತೆರೆಯಲಾಗಿದೆ· ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸಹಕಾರಿ ಅಪೆಕ್ಸ್ ಬ್ಯಾಂಕ್‌ಗಳ ಮುಖೇನ ವಾಹನ ತೆರಿಗೆ ವಸೂಲಿ ಯೋಜನೆಯನ್ನು ರಾಜ್ಯಾದ್ಯಂತ ಮುಂದುವರೆಸಿದೆ· ದಕ್ಷಿಣ ಭಾರತ ಆಟೋಮೊಬೈಲ್ಸ್ ಅಸೋಸಿಯೇಷನ್, ಬೆಂಗಳೂರು ಶಾಖೆಯು ಸಂಸ್ಥೆಯ ಸದಸ್ಯರಿಂದ ಮಾತ್ರ ಸಾರಿಗೇತರ ವಾಹನಗಳ ಬಾಬ್ತು ತೆರಿಗೆಯನ್ನು ವಸೂಲಿ ಮಾಡುತ್ತದೆ·

8·4 <u>ಜೀವಾವಧಿ ತೆರಿಗೆ</u> :

ದ್ವಿಚಕ್ರ ವಾಹನಗಳಿಗೆ ಜೀವಾವಧಿ ತೆರಿಗೆ ವಿಧಿಸುವ ಕ್ರಮ ಈ ವರ್ಷವೂ ಮುಂದುವರೆದಿದೆ· ವ್ಯವಸಾಯಕ್ಕೆ ಉಪಯೋಗಿಸುವ ಟ್ರ್ಯಾಕ್ಟರ್ ಟ್ರೈಲರಗಳ ಜೀವಾವಧಿ ತೆರಿಗೆ ವಸೂಲಿ 1·4·90 ರಲ್ಲಿ ಪ್ರಾರಂಭಿಸಿದ್ದು ಈ ವರ್ಷವೂ ಮುಂದುವರೆದಿದೆ· ವ್ಯವಸಾಯಕ್ಕೆ ಉಪಯೋಗಿಸುವ ಪವರ ಟಿಲ್ಲರಗಳಿಗೆ 1·4·91 ರಿಂದ ನೀಡಿದ ತೆರಿಗೆ ವಿನಾಯಿತಿ ಈ ವರ್ಷವೂ ಮುಂದುವರೆದಿದೆ· 1939 ಹಾಗೂ ಇದಕ್ಕಿಂತ ಹಿಂದಿನ ವರ್ಷಗಳಲ್ಲಿ ತಯಾರಾದ ಪ್ರಾಚೀನ ವಾಹನಗಳಿಗೂ 1940—1949 ರಲ್ಲಿ ತಯಾರಾದ ಕ್ಲಾಸಿಕ್ ಕಾರುಗಳಿಗೂ ಜೀವಾವಧಿ ತೆರಿಗೆಯನ್ನು 1·4·91 ರಿಂದ ಪ್ರಾರಂಭಿಸಲಾಗಿದೆ·

8·5 <u>ಫ್ಲೀಟ್ ಮಾಲೀಕರ ಮೇಲಿನ ತೆರಿಗೆ</u> :

ದಿನಾಂಕ 1·4·1988 ರಿಂದ ಕರ್ನಾಟಕ ಮೋಟಾರು ವಾಹನಗಳ ಕಾಯಿದೆ 8·86 ರ ಪ್ರಕಾರ ಫ್ಲೀಟ್ ಮಾಲೀಕರು

ಹೊಂದಿರುವ ಸಾರ್ವಜನಿಕ ಸೇವಾ ವಾಹನಗಳ ದರ ಮತ್ತು ಬಾಡಿಗೆಗಳಿಂದ ಬಂದ ಒಟ್ಟು ಆದಾಯದ ಶೇಕಡ 15 ಭಾಗ ತೆರಿಗೆಯನ್ನು ವಿಧಿಸಿದ್ದು. ಅದನ್ನು ಈ ವರ್ಷವೂ ಮುಂದುವರಿಸಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯದಲ್ಲಿ ಈ ರೀತಿಯ ಒಂದೇ ಒಂದು ಫ್ಲೀಟ್ ಮಾಲೀಕರಾಗಿರುತ್ತಾರೆ. 1994ರ ಅಂತ್ಯಕ್ಕೆ (1-4-94 ರಿಂದ 31-12-94) ಒಟ್ಟು 11.00 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಸೂಲಿ ಮಾಡಲಾಗಿದೆ.

8.6. ವಿವಿಧ ಸಂಘ-ಸಂಸ್ಥೆಗಳಿಗೆ ಸೇರಿದ 4 ಮೋಟಾರು ವಾಹನಗಳಿಗೆ ಸದರಿ ಸಂಸ್ಥೆಗಳು ಸಲ್ಲಿಸಿರುವ ಸಾರ್ವಜನಿಕ ಸೇವೆಯನ್ನು ಪರಿಗಣಿಸಿ ತೆರಿಗೆ ವಿನಾಯ್ತಿಯನ್ನು ನೀಡಲಾಗಿದೆ. ಅಲ್ಲದೆ ವಿಧ್ಯಾ ಸಂಸ್ಥೆಗೆ ಸೇರಿದ ಒಂದು ವಾಹನಕ್ಕೆ ರಿಯಾಯಿತಿ ಧರದಲ್ಲಿ ತೆರಿಗೆ ಪಾವತಿಸಲು ಸಹ ಅನುಮತಿ ನೀಡಲಾಗಿದೆ.

8.7. <u>ತೆರಿಗೆ ಪಾವತಿ ಮಾಡುವುದರಿಂದ ವಿನಾಯಿತಿ</u>:

ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಟಿಡಿ 236 ಟಿಎಂಇ 93 ದಿನಾಂಕ:27-11-93 ಅನ್ವಯ ಬ್ಯಾಟರಿ ಸಹಾಯದಿಂದ ನಡೆಸಲ್ಪಡುವ ಮೋಟಾರು ವಾಹನಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು 5 ವರ್ಷಗಳ ವರೆಗೆ ಮೋಟಾರು ವಾಹನ ನೋಂದಣಿಯಾದ ದಿನಾಂಕದಿಂದ ತೆರಿಗೆ ಪಾವತಿಸುವುದನ್ನು ವಿನಾಯಿತಿ ಮಾಡಿರುತ್ತದೆ.

9. <u>ಆದಾಯ ಮತ್ತು ಖರ್ಚು</u>:

ಸಾರಿಗೆ ಇಲಾಖೆಯು ರಾಜ್ಯದಲ್ಲಿ ಹೆಚ್ಚು ಆದಾಯಗಳಿಸುವ ಇಲಾಖೆಗಳಲ್ಲಿ ಒಂದು. ಕರ್ನಾಟಕ ಮೋಟಾರು ವಾಹನ ತೆರಿಗೆ 1957ರ ಪ್ರಕಾರ ಇಲಾಖೆಯು 317.19 ಕೋಟಿ ರೂಪಾಯಿ ಆದಾಯ ಗುರಿಯನ್ನು ಹೊಂದಿದ್ದು, ಈ ಅವಧಿಯಲ್ಲಿ 161.22 ಕೋಟಿ ರೂಪಾಯಿಗಳನ್ನು ವಸೂರಿ ಮಾಡಿದೆ.

ಕಳೆದ ಐದು ವರ್ಷಗಳಲ್ಲಿ ಇಲಾಖೆಯಲ್ಲಿ ವಸೂಲಾದ ರಾಜಸ್ವ ಮತ್ತು ಅದರಿಂದಾದ ವೆಚ್ಚಗಳ ಶೇಕಡವಾರು ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಕಳೆದ 5 ವರ್ಷಗಳ ಇಲಾಖೆಯ ಆದಾಯ ಹಾಗೂ ವೆಚ್ಚದ ವಿವರಗಳು ಈ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ಆದಾಯದ ಗುರಿ (ಕೋಟಿ ರೂ.ಗಳಲ್ಲಿ) | ವಸೂಲಾದದ್ದು (ರೂ.ಗಳಲ್ಲಿ ಕೋಟಿ) | ಒಟ್ಟು ವೆಚ್ಚ (ಕೋಟಿ ರೂ.ಗಳಲ್ಲಿ) | ಆದಾಯದ ಗುರಿಯ ಮೇಲೆ ಹೆಚ್ಚು: ಕಡಿಮೆ ವಸೂಲಾದ ಶೇ : ದರ | ವಸೂಲಾತಿಯ ಮೇಲೆ ವೆಚ್ಚ ಶೇಕಡವಾರು |
|---|---|---|---|---|---|---|
| 1. | 1990—91 | 190—00 | 192—42 | 6—44 | (+) 1·27 | 3·34 |
| 2. | 1991—92 | 215—00 | 227—47 | 8—12 | (+) 5·08 | 3·57 |
| 3. | 1992—93 | 244—00 | 220—51 | 9—17 | (—) 9·43 | 4·16 |
| 4. | 1993—94 | 265—67 | 259—72 | 10—65 | (—) 9·77 | 3·92 |
| 5. | 1994—95 (1994ನೇ ಡಿಸೆಂಬರ್ ವರೆಗೆ) | 317—19 | 161—22 | 5—70 | | |

## ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಕ್ರಮ:

10·1. ದಿನಾಂಕ:26—3—93ರಂದು ಕೇಂದ್ರ ಸರ್ಕಾರವು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 115 ಮತ್ತು 116ನ್ನು ತಿದ್ದುಪಡಿಮಾಡಿದೆ. ನಿಯಮ 115ಕ್ಕೆ ಉಪ ನಿಯಮ 7 ಮತ್ತು 8ಗಳನ್ನು ಸೇರಿಸಿದೆ. ಈ ಸೇರ್ಪಡೆಗೊಳಿಸಲ್ಪಟ್ಟ ನಿಯಮಗಳಂತೆ ಪ್ರತೀ ವಾಹನ ಮಾಲೀಕನು ವಾಹನವು ನೋಂದಣಿಯಾದ ಒಂದು ವರ್ಷದ ಬಳಿಕ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಒಂದು ವಾಯು ಮಾಲಿನ್ಯ ತಪಾಸಣಾ ಕೇಂದ್ರದಿಂದ ''ವಾಯು ಮಾಲಿನ್ಯ ಹತೋಟಿಯಲ್ಲಿದೆ'' ಎಂಬ ದೃಢೀಕರಣ ಪತ್ರವನ್ನು ಪಡೆದು ವಾಹನದೊಂದಿಗೆ ಸದಾ ಇಟ್ಟುಕೊಳ್ಳಬೇಕಾಗಿದೆ. ಈ ದೃಢೀಕರಣ ಪತ್ರವು ಆರು ತಿಂಗಳ ಅವಧಿವುಳ್ಳದಾಗಿದ್ದು ಇಡೀ ಭಾರತ ದೇಶದಲ್ಲಿ ಮಾನ್ಯತೆ ಹೊಂದಿರುತ್ತದೆ ಹಾಗೂ ಅದನ್ನು ತಪಾಸಣೆ ಕಾಲದಲ್ಲಿ ಅಧಿಕಾರಿಗಳಿಗೆ ತೋರಿಸಬೇಕಾಗುತ್ತದೆ. ಕೇಂದ್ರ ಮೋಟಾರು ವಾಹನಗಳ ನಿಯಮ 116ರ ತಿದ್ದುಪಡಿಯಾಗಿದ್ದು ಉಪನಿಯಮಗಳು 4 ರಿಂದ 9ಗಳನ್ನು ಹೊಸದಾಗಿ ಸೇರಿಸಲಾಗಿದೆ. ತಿದ್ದುಪಡಿಯಾದ ನಿಯಮದ ಪ್ರಕಾರ ವಾಹನ ಚಾಲಕ, ಮಾಲೀಕ ಉಸ್ತುವಾರಿ ಹೊಂದಿದ ವ್ಯಕ್ತಿಯು ವಾಯು ಮಾಲಿನ್ಯ ನಿಯಂತ್ರಣ ದೃಢೀಕರಣ ಪತ್ರವನ್ನು ತೋರಿಸುವಲ್ಲಿ ವಿಫಲವಾದರೆ, ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 115(2) ರಲ್ಲಿ ನಿಗದಿಪಡಿಸಿದ ಉಪಬಂಧಗಳನ್ನು ಮೀರಿದೆ ಎಂದು ನಂಬಲು ಅವಕಾಶವಾಗುತ್ತದೆ. ಇಲಾಖೆಯ ತಪಾಸಣಾ ತಂಡದವರು ತಪಾಸಣಾ ಕಾಲದಲ್ಲಿ ಅಂತಹ ಪ್ರಕರಣಗಳಲ್ಲಿ ವಾಹನ ಚಾಲಕ: ಮಾಲೀಕ ಉಸ್ತುವಾರಿ ಹೊಂದಿದ ವ್ಯಕ್ತಿಗೆ ಒಂದು ತಿಳುವಳಿಕೆ ಪತ್ರವನ್ನು ಕೊಟ್ಟು ವಾಹನವನ್ನು ಯಾವುದಾದರೂ ಒಂದು ಅಧಿಕೃತ ವಾಯು ಮಾಲಿನ್ಯ ಕೇಂದ್ರ ತಪಾಸಣೆ ಮಾಡಿಸಿ ''ವಾಯು ಮಾಲಿನ್ಯ ನಿಯಂತ್ರಣದಲ್ಲಿದೆ'' ಎಂದು ದೃಢೀಕರಣ ಪತ್ರವನ್ನು ಏಳು ದಿನಗಳೊಳಗಾಗಿ ಉಪ ನಿಯಮ (1)ರಡಿ ನೋಂದಣಿ ಪ್ರಾಧಿಕಾರದ ಮುಂದೆ ನಿರ್ದಿಷ್ಟ ಸಮಯದಲ್ಲಿ ಹಾಜರುಪಡಿಸಲು ತಿಳಿಸಬೇಕು. ಇಷ್ಟರಲ್ಲಿ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 116(6) ಮತ್ತು (7)ಗಳಲ್ಲಿ ತಿಳಿಯಪಡಿಸಿದಂತೆ, ಮೋಟಾರು ವಾಹನ ಕಾಯ್ದೆಯ

88ರ ಕಲಂ 190(2) ರಂತೆ ಕ್ರಮವನ್ನು ಜರುಗಿಸಬೇಕಾಗಿದೆ. ಹಾಗೂ ವಾಹನ ನೋಂದಣಿಯನ್ನು ಅಮಾನತ್ತುಪಡಿಸಬೇಕಾಗುತ್ತದೆ. ಹಾಗೂ ವಾಹನ ಮಾಲೀಕರು ವಾಹನ ವಾಯು ಮಾಲಿನ್ಯ ಹತೋಟಿಯಲ್ಲಿದೆ ಎಂಬ ದೃಢೀಕರಣ ಪತ್ರವನ್ನು ತನಿಖಾಧಿಕಾರಿಗಳು ಕೇಳಿದಾಗ ತೋರಿಸದಿದ್ದಲ್ಲಿ ನಿಯಮ 115(2)ನ್ನು ಉಲ್ಲಂಘಿಸಿದಂತೆ ಆಗುತ್ತದೆ. ಇದರ ಸಲುವಾಗಿ ತನಿಖಾಧಿಕಾರಿ ನಿಯಮ 116(1)ರ ಪ್ರಕಾರ ತಿಳುವಳಿಕೆ ಪತ್ರವನ್ನು ನೀಡಬೇಕಾಗುತ್ತದೆ. ದೃಢೀಕರಣ ಪತ್ರವನ್ನು 7 ದಿನಗಳಲ್ಲಿ ಅಧಿಕಾರಿಗಳ ಮುಂದೆ ಹಾಜರುಪಡಿಸದಿದ್ದಲ್ಲಿ ಮೋಟಾರು ವಾಹನ ಕಾಯಿದೆ 1988ರ ಕಲಂ 190(2)ರ ಪ್ರಕಾರ ಹಾಗೂ ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು 1989 ನಿಯಮ 116(8) ಮತ್ತು (7)ರ ಪ್ರಕಾರ ನ್ಯಾಯಾಲಯದಲ್ಲಿ ತಪ್ಪಿತಸ್ಥರ ವಿರುದ್ಧ ಮೊಕದ್ದಮೆ ಹೂಡಲಾಗುವುದು.

ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು 1989ರ ನಿಯಮಗಳು 116(3) ಮತ್ತು 126ಗಳಲ್ಲಿ ತಿಳಿಸುವ 5 ಏಜೆನ್ಸಿಗಳಿಂದ ಅನುಮೋದನೆ ಪಡೆದ ಉಪಕರಣಗಳನ್ನು ವಾಯು ಮಾಲಿನ್ಯ ತಪಾಸಣೆಗೆ ತಪಾಸಣಾ ಕೇಂದ್ರಗಳು ಉಪಯೋಗಿಸಬೇಕಾಗಿದೆ ಮತ್ತು ದೃಢೀಕರಣ ಪತ್ರಗಳನ್ನು ಕೊಡಬೇಕಾಗಿರುವುದರಿಂದ ಈ ದೃಢೀಕರಣ ಪತ್ರಗಳು 6 ತಿಂಗಳು ಸಿಂಧು ಆಗಿರುತ್ತದೆ.

ತಿದ್ದುಪಡಿಯಾದ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುಕೂಲವಾಗುವಂತೆ ಎಲ್ಲಾ ಪ್ರಾದೇಶಿಕ

ಸಾರಿಗೆ ಅಧಿಕಾರಿ: ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಎಲ್ಲಾ ವರ್ಗದ ವಾಹನ ಮಾಲೀಕರು ಅರ್ಹತಾ ಪತ್ರ ನವೀಕರಣ, ನೋಂದಣಿ ನವೀಕರಣ, ಮಾಲೀಕತ್ವ ಬದಲಾವಣೆ ಪತ್ರ, ವಿಳಾಸ ಬದಲಾವಣೆ, ರಹದಾರಿ ಆಕ್ಷೇಪಣಾ ರಹಿತ ಪತ್ರ, ಸಾಲ ತೀರುವಳಿ ಪತ್ರ, ರಹದಾರಿ ನವೀಕರಣ, ರಹದಾರಿ ವರ್ಗಾವಣೆ, ಕಂತು ಕರಾರು ಒಪ್ಪಂದ ಹಾಗೂ ರದ್ದತಿ ಮತ್ತು ಮುಂದುವರಿಕೆ ಮುಂತಾದ ಕೆಲಸಗಳಿಗೆ ಬಂದಾಗ ತಪ್ಪದೆ ವಾಯು ಮಾಲಿನ್ಯ ಹತೋಟಿಯಲ್ಲಿದೆ ಎಂಬ ದೃಢೀಕರಣ ಪತ್ರವನ್ನು ಇತರೆ ದಾಖಲೆಗಳ ಜೊತೆಯಲ್ಲಿ ಹಾಜರು ಪಡಿಸುವಂತೆ ನೋಡಿಕೊಳ್ಳತಕ್ಕದ್ದು ಎಂಬ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಪ್ರಾರಾ ಬಂದರಂತೆ ದಿನಾಂಕ:1–4–94 ರಿಂದ 31–12–94ರವರೆಗೆ 23537 ಡೀಸೆಲ್ ವಾಹನಗಳನ್ನು 78068 ಪೆಟ್ರೋಲ್ ವಾಹನಗಳ ವಿರುದ್ಧ ತನಿಖೆಗೆ ಒಳಪಡಿಸಿ 1607 ಡೀಸೆಲ್ 1783 ಪೆಟ್ರೋಲ್ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ಒಟ್ಟು 910 ವಾಹನಮಾಲೀಕರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಿ ರೂ.49,000 ಮೊತ್ತವನ್ನು ವಸೂಲು ಮಾಡಲಾಗಿದೆ.

ರಾಜ್ಯದಲ್ಲಿ ಬೆಂಗಳೂರಿನ 5 ಕಛೇರಿಗಳು, ಬೆಳಗಾವಿ ಧಾರವಾಡ, ಮಂಗಳೂರು, ಶಿವಮೊಗ್ಗ, ಮೈಸೂರು ಜಿಲ್ಲೆಗಳಲ್ಲಿ ವಾಯು ಮಾಲಿನ್ಯ ಹತೋಟಿಯ ಕ್ರಮಗಳನ್ನು ಜರುಗಿಸಲಾಗುತ್ತಿದೆ. ಪೆಟ್ರೋಲ್ ವಾಹನಗಳನ್ನು ತಪಾಸಣೆ ಮಾಡಲು 46 ಕೇಂದ್ರಗಳನ್ನು ಡೀಸಲ್ ವಾಹನ ತಪಾಸಣೆ

ಮಾಡಲು ಒಂದು ಕೇಂದ್ರವನ್ನು ಮತ್ತು ಪೆಟ್ರೋಲ ಮತ್ತು ಡೀಸಲ ವಾಹನ ತಪಾಸಣೆ ಮಾಡಲು ಸ್ಥಾಪಿಸಿದ್ದು ಅದರಲ್ಲಿ 38 ಕೇಂದ್ರಗಳು ಬೆಂಗಳೂರಿನಲ್ಲಿದ್ದು ಉಳಿದ 8 ಕೇಂದ್ರಗಳು ಇತರ ಜಿಲ್ಲೆಗಳಲ್ಲಿವೆ. ಇದೂ ಅಲ್ಲದೆ ಮೈಸೂರು, ಮಂಡ್ಯ, ಶಿವಮೊಗ್ಗ, ಧಾರವಾಡ, ಸೂರತ್ಕಲ ಮತ್ತು ಮಂಗಳೂರಿನಲ್ಲಿ ತಲಾ ಒಂದೊಂದು ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಪೆಟ್ರೋಲ ವಾಹನಗಳನ್ನು ತಪಾಸಣೆ ಮಾಡಿ ದೃಢೀಕರಣ ಪತ್ರಗಳನ್ನು ನೀಡಲು ಪರವಾನಗಿಯನ್ನು ಕೊಡಲಾಗಿದೆ.

ಇಲಾಖೆಯಲ್ಲಿ ಈಗಾಗಲೇ ಪೆಟ್ರೋಲ ವಾಹನಗಳ ತಪಾಸಣೆ ಮಾಡಲು ಮತ್ತು ಡೀಸಲ ವಾಹನಗಳನ್ನು ತಪಾಸಣೆ ಮಾಡಲು ತಲಾ ಐದೈದು ವಾಯು ಮಾಲಿನ್ಯ ಉಪಕರಣಗಳನ್ನು ಒದಗಿಸಲಾಗಿದೆ.

## 11. ಕಟ್ಟಡಗಳು:

ಸಾರ್ವಜನಿಕರಿಗೆ ಒಳ್ಳೆಯ ಅನುಕೂಲ ಕಲ್ಪಿಸುವ ಸಲುವಾಗಿ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಉಚಿತ ವ್ಯಯವನ್ನು ಚುರುಕುಗೊಳಿಸುವ ಸಲುವಾಗಿ ಕೆಲವು ಸ್ಥಳಗಳಲ್ಲಿ ಇಲಾಖಾ ಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸಲಾಗುತ್ತಿದೆ.

ಸಾರಿಗೆ ಆಯುಕ್ತರ ಕಛೇರಿಯು ಉಪ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಶಿವಮೊಗ್ಗ ಇವು ಸರ್ಕಾರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮತ್ತು ಜಂಟಿ ಸಾರಿಗೆ ಆಯುಕ್ತರ

RB N95 04147
COMMUNITY HEALTH CELL
LIBRARY AND DOCUMENTATION UNIT

(ಉತ್ತರ)ಧಾರವಾಡ ಮತ್ತು ಉಪ ಸಾರಿಗೆ ಆಯುಕ್ತರ ಕಛೇರಿ, ಬೆಳಗಾಂ, ಗುಲ್ಬರ್ಗಾ, ಮೈಸೂರು, ಇಲಾಖಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು, ತುಮಕೂರು, ಕೋಲಾರ, ಮಂಡ್ಯ, ಮೈಸೂರು, ಮಡಿಕೇರಿ, ಚಿತ್ರದುರ್ಗ, ಮಂಗಳೂರು, ಬೆಳಗಾಂ, ಧಾರವಾಡ, ಕಾರವಾರ, ಗುಲ್ಬರ್ಗಾ ಬಿಜಾಪುರ, ಬಳ್ಳಾರಿ, ಕೋಲಾರ, ಇಲಾಖೆ ಹೊಂದಿರುವ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಹಾಸನ ತಾತ್ಕಾಲಿಕವಾಗಿ ಹೊಸದಾಗಿ ಕಟ್ಟಿರುವ ಇಲಾಖಾ ಸಿಬ್ಬಂದಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಕೆಳಕಂಡ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ : ಉಪ ಸಾರಿಗೆ ಆಯುಕ್ತರ ಕಛೇರಿ, ಶಿವಮೊಗ್ಗ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು(ಕೇಂದ್ರ) ದಕ್ಷಿಣ, ಪೂರ್ವ ಮತ್ತು ಪಶ್ಚಿಮ, ದಾವಣಗೆರೆ, ಉಡುಪಿ, ಚಿಕ್ಕಮಗಳೂರು, ಬೀದರ್, ರಾಯಚೂರು, ಹೊಸಪೇಟೆ, ಗಂಗಾವತಿ, ಸಿರ್ಸಿ, ಚಿಕ್ಕೋಡಿ, ಬಾಗಲಕೋಟೆ, ಚಾಮರಾಜನಗರ, ಗದಗ, ಹಾವೇರಿ, ಮತ್ತು ಉಪ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೆ.ಜಿ.ಎಫ್., ಪುತ್ತೂರು, ಸಾಗರ, ಯಾದಗಿರಿ, ಬೈಲಹೊಂಗಲ, ಬಾಲ್ಕಿ, ಚಿಕ್ಕಬಳ್ಳಾಪುರ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿವೆ.

ಇಲಾಖೆಯು ಕಛೇರಿಗಳಿಗೆ ಕಟ್ಟಡಗಳನ್ನು ಕಟ್ಟಲು ಚಿಕ್ಕಮಗಳೂರು, ಉಡುಪಿ, ಹಾವೇರಿ, ಬೀದರ್, ಗಂಗಾವತಿ ದಾವಣಗೆರೆ, ಗದಗ್, ಪುತ್ತೂರು, ಚಾಮರಾಜನಗರ ಮತ್ತು ಬೆಂಗಳೂರು (ಉತ್ತರ) ನಿವೇಶನಗಳನ್ನು ಪಡೆದುಕೊಂಡಿದೆ.

1994ನೇ ಸಾಲಿನಲ್ಲಿ ಸರ್ಕಾರವು ಈ ಕೆಳಕಂಡ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳ ಕಟ್ಟಡ ನಿರ್ಮಾಣಕ್ಕೆ ಈ ಕೆಳಕಂಡ ಮೊತ್ತವನ್ನು ಒದಗಿಸಲಾಗಿದೆ:

| | |
|---|---|
| 1) ಹಾಸನ : | 80,000—00 |
| 2) ಮೈಸೂರು | 20,000—00 |
| ಒಟ್ಟು: | 1.00,000—00 |

12. ಗಣಕೀಕರಣ:

ಸಾರಿಗೆ ಇಲಾಖೆಯು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು, ಬೆಂಗಳೂರು (ಕೇಂದ್ರ) ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಬೆಂಗಳೂರು—ಉತ್ತರ, ಮಂಗಳೂರು, ಧಾರವಾಡ ಮತ್ತು ಮೈಸೂರುಗಳಲ್ಲಿ ಕಲಿಕೆ ಪರವಾನಿಗೆಗಳನ್ನು ನೀಡಲು ಸಂಪೂರ್ಣ ಗಣಕೀಕರಣ ಗೊಳಿಸಲಾಗಿದೆ. ಹಾಗೆಯೇ ಸಾರಿಗೆ ಆಯುಕ್ತರ ಕಛೇರಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಗಣಕೀಕರಣ ವ್ಯವಸ್ಥೆ ಗೊಳಿಸಲಾಗಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಳಗಾಂ, ಗುಲ್ಬರ್ಗಾಗಳಲ್ಲಿ ಅಭ್ಯರ್ಥಿಗಳನ್ನು ಪರೀಕ್ಷಿಸಿ ಕಲಿಕೆ ಪರವಾನಗಿ ನೀಡುವ ಸಲುವಾಗಿ ಗಣಕೀಕರಣಗೊಳಿಸಲು ಪ್ರಸ್ತಾಪವಿರುತ್ತದೆ.

ಅದರಂತೆ ಕೇಂದ್ರ ಕಛೇರಿಯಲ್ಲಿ ಬೆಂಗಳೂರಿನಲ್ಲಿರುವ ಎಲ್ಲಾ ಕಛೇರಿಗಳ ಸಂಬಳ ಪಟ್ಟಿಯನ್ನು ಗಣಕೀಕರಿಸಲು, ಎಲ್ಲಾ ವರದಿಗಳನ್ನು ಅದರಲ್ಲಿ ಪಡೆಯಲು ಗಣಕ ಯಂತ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೇ ರಾಜ್ಯ ಸಾರಿಗೆ ಪ್ರಾಧಿಕಾರದ ದಾಖಲೆಗಳನ್ನು ಮಾಹಿತಿಗಾಗಿ ಪಡೆಯಲು ಮತ್ತು ಪರವಾನಗಿಗಳನ್ನು ನೀಡಲು ಗಣಕೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಮುದ್ರಕರು :—ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ ಬೆಂಗಳೂರು—1

ಮುದ್ರಕರು :

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ.
ಸರ್ಕಾರಿ ಮುದ್ರಣಾಲಯ, ಬೆಂಗಳೂರು